CREATIVE EDUCATION FOUNDATION MOODBIDRI (R)

# ಕ್ರಿಯೇಟಿವ್ ನಿನಾದ

ಕರಾವಳಿಯ ಅತೀ ದೊಡ್ಡ ಪುಸ್ತಕ ಮಳಿಗೆ
ಸಾಹಿತ್ಯ ಕೃತಿಗಳ ಬೃಹತ್ ಸಂಗ್ರಹ
ಕ್ರಿಯೇಟಿವ್ ಪುಸ್ತಕ ಮನೆ
ಪುಟಗಳೊಂದಿಗೆ ಪಯಣ...
ಇದೀಗ ಮೂಡುಬಿದಿರೆಯಲ್ಲಿ...

ಡಿಸೆಂಬರ್ - ಫೆಬ್ರವರಿ 2024

ತ್ರೈಮಾಸಿಕ ಪತ್ರಿಕೆ | ಕ್ರಿಯಾಶೀಲ ಮನಸ್ಸುಗಳಿಗಾಗಿ... | ಸಂಪುಟ 2 ಸಂಚಿಕೆ 7

## ಶಿಕ್ಷಣ ಕ್ಷೇತ್ರದ ಅಪೂರ್ವ ಮೈಲುಗಲ್ಲು...

# ಕ್ರಿಯೇಟಿವ್

## ಯಶಸ್ವಿ 4ನೇ ವರ್ಷದ ಹೊಸ್ತಿಲಲ್ಲಿ...

(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)

"ಕಾರ್ಕಳ" ಉಡುಪಿ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಕಾರ್ಕಳವು ಬೆಂಗಳೂರಿನಿಂದ ಸುಮಾರು 360 ಕಿ.ಮೀ. (ಮಂಗಳೂರಿನಿಂದ 50 ಕಿ.ಮೀ.) ದೂರದಲ್ಲಿದೆ. ಪಶ್ಚಿಮಘಟ್ಟದ ಬುಡದಲ್ಲಿರುವ ಈ ಊರು ಹಲವು ಶತಮಾನಗಳ ಹಿಂದೆ ಜೈನ ರಾಜರ ಆಳ್ವಿಕೆಯ ಕಾಲದಲ್ಲಿ ಪಾಂಡ್ಯನಗರಿ ಎಂದು ಪ್ರಸಿದ್ಧಿ ಪಡೆದಿತ್ತು. ಕಾಲಕ್ರಮೇಣ ಇಲ್ಲಿರುವ ಕರಿ ಬಂಡೆಗಳಿಂದ 'ಕರಿಕಲ್ಲು' ಎಂದು ಪ್ರಸಿದ್ಧವಾಗಿತ್ತು. ಮುಂದೆ 'ಕರಿಕಲ್ಲು' ತುಳುವಿನಲ್ಲಿ 'ಕಾರ್ಲ'ವೆಂದು ಮಾರ್ಪಟ್ಟು ಕನ್ನಡದಲ್ಲಿ 'ಕಾರ್ಕಳ' ಎಂದು ಹೆಸರಾಗಿದೆ. 47 ಅಡಿ ಎತ್ತರದ ಏಕಶಿಲಾ ಗೊಮ್ಮಟೇಶ್ವರ ಮೂರ್ತಿ, ಚತುರ್ಮುಖ ಬಸದಿ ಮತ್ತು ಇತರ ಧಾರ್ಮಿಕ ಕ್ಷೇತ್ರಗಳ ಮೂಲಕ ಕಾರ್ಕಳವು ಪ್ರವಾಸಿ ಸ್ಥಳವಾಗಿ ಛಾಪು ಮೂಡಿಸಿದೆ.

ಕಾರ್ಕಳದ ಹಿರ್ಗಾನ ಗ್ರಾಮದಲ್ಲಿರುವ ಕ್ರಿಯೇಟಿವ್ ಪ.ಪೂ ಕಾಲೇಜು ಹೈಟೆಕ್ ಶಿಕ್ಷಣದಲ್ಲಿ ಒಂದೇ ವರ್ಷಕ್ಕೆ ರಾಜ್ಯದ ಗಮನಸೆಳೆದ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ಕಾನಂಗಿ ವೆಂಕಟರಮಣ ದೇವರು ಹಾಗೂ ಈ ಜಾಗದ ಎಲ್ಲಾ ದೈವ-ದೇವರುಗಳ ಶುಭಾಶೀರ್ವಾದಗಳನ್ನು ಪಡೆದು ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಪ್ತ ಸಂಸ್ಥಾಪಕರು ಸೇರಿ ಸ್ಥಾಪಿಸಿದ ಕ್ರಿಯೇಟಿವ್ ಕಾಲೇಜಿನ ಕ್ಯಾಂಪಸ್‌ಗಿರುವ ಹೆಸರು 'ಸಪ್ತಗಿರಿ ಕ್ಯಾಂಪಸ್'. ಕಾಲೇಜಿನ ಪ್ರವೇಶಾರಂಭದಲ್ಲಿಯೇ ಸರಸ್ವತಿ ವಿಗ್ರಹವಿದ್ದು ಕರಮುಗಿದು ಮುನ್ನಡೆದರೆ ವಿದ್ಯಾ ಸರಸ್ವತಿ ಒಲಿಯುವುದಂತೂ ದಿಟ.

### ಸಂಸ್ಥೆಯ ಆರಂಭದಿಂದಲೂ ಸತತ ಮೂರು ವರ್ಷವೂ ಶೇ.100 ಫಲಿತಾಂಶ

ಪ್ರಸ್ತುತ, ಕಾಲೇಜು ಸಮಗ್ರ ಅಧ್ಯಯನ ವಾತಾವರಣದ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ವಿದ್ಯಾರ್ಥಿಗಳಿಗೆ ಪಿ.ಯು. ಬೋರ್ಡ್ ಜೊತೆಗೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಶಿಕ್ಷಣವು ಒಂದೇ ಸೂರಿನಡಿಯಲ್ಲಿ ದೊರಕುವಂತಿದೆ. ಕಾಲೇಜು ತನ್ನ ಕ್ಷೇತ್ರದಲ್ಲಿ ಅತ್ಯಂತ ದಕ್ಷತೆಯನ್ನು ಹೊಂದಿರುವ ಸಂಪನ್ಮೂಲ ಬೋಧನಾ ಉಪನ್ಯಾಸಕ ವರ್ಗವನ್ನು ಹೊಂದಿದೆ. ಅಲ್ಲದೇ ಆಧುನಿಕ ಮೂಲ ಸೌಕರ್ಯವನ್ನು ಒಳಗೊಂಡಿದೆ.

ಆರಂಭದ ವರ್ಷದಿಂದಲೇ ಕ್ರಿಯೇಟಿವ್ ಕಾಲೇಜು ಪ್ರತಿಶತಃ 100 ಶೇಕಡಾ ಫಲಿತಾಂಶವನ್ನು ಪಡೆಯುತ್ತಿದ್ದು, ಈ ಬಾರಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಅಲ್ಲದೇ ಟಾಪ್ 10 ರ‍್ಯಾಂಕ್‌ಗಳ ಪಟ್ಟಿಯಲ್ಲಿ ಹಲವಾರು ವಿದ್ಯಾರ್ಥಿಗಳು ಗುರುತಿಸಿಕೊಂಡಿದ್ದು, ಎಲ್ಲಾ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿಯೇ ತೇರ್ಗಡೆಗೊಂಡಿರುವುದು ಗಮನಾರ್ಹ.

### ರಾಷ್ಟ್ರಮಟ್ಟದ ಪ್ರತಿಷ್ಠಿತ ಸಂಸ್ಥೆಗಳಿಗೂ ಆಯ್ಕೆಯಾದ ಕ್ರಿಯೇಟಿವ್ ವಿದ್ಯಾರ್ಥಿಗಳು

ಪ್ರತಿಯೊಬ್ಬ ವಿದ್ಯಾರ್ಥಿಯ ಕನಸುಗಳು ಮತ್ತು ಸಾಮರ್ಥ್ಯವನ್ನು ಪೋಷಿಸಲು ಮತ್ತು ಯಶಸ್ಸಿನ ಶಿಖರವನ್ನು ತಲುಪಲು ಕ್ರಿಯೇಟಿವ್ ಶಿಕ್ಷಣ ಸಂಸ್ಥೆ ಸದಾ ಬದ್ಧವಾಗಿದೆ. NEET, JEE, KCET, NATA, NDA, CA-Foundation, CSEET ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉತ್ತಮ ಕೋಚಿಂಗ್‌ಗಳು ದೊರೆಯುತ್ತಿದ್ದು, JIPMER, AIIMS ನಂತಹ ದೇಶದ ಅತ್ಯುನ್ನತ ಸಂಸ್ಥೆಯಲ್ಲೂ ವಿದ್ಯಾರ್ಥಿಗಳು ಮುಂದಿನ ಶಿಕ್ಷಣಕ್ಕೆ ಅವಕಾಶವನ್ನು ಪಡೆದುಕೊಂಡಿರುವುದು ಅತ್ಯಂತ ಹೆಮ್ಮೆಯ ವಿಚಾರವಾಗಿದೆ.

ವಿದ್ಯಾರ್ಥಿಗಳ ಓದಿಗೆ ಸಂಬಂಧಿಸಿದ ಎಲ್ಲಾ ಸ್ಟಡಿ ಮೆಟೀರಿಯಲ್‌ಗಳನ್ನು ಸಂಸ್ಥೆಯೇ ಸ್ವತಃ ತಯಾರಿಸಿ ಪೂರೈಸುತ್ತಿದ್ದು, **ಕ್ರಿಯೇಟಿವ್ ಇನ್‌ಸ್ಪಿರೋ,** ಎಂಬ ಹೆಸರಿನಲ್ಲಿ ವಿದ್ಯಾರ್ಥಿಗಳ ಪ್ರೇರಣೆಗಾಗಿ ಪ್ರತೀ ತಿಂಗಳು ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗುತ್ತದೆ. **'ಕ್ರಿಯೇಟಿವ್ ಸಮಾಗಮ', 'ಕ್ರಿಯೇಟಿವ್ ಸವಿಗಾನ'**ದಂತಹ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತೆ ಹುಟ್ಟಿಕೊಂಡಿರುವ ಹಲವು ಸಂಘಗಳಲ್ಲಿ ಮಹತ್ತರವಾದ ಪಾತ್ರವಹಿಸುತ್ತಿರುವುದು "**ಸಾಹಿತ್ಯ-ಸಾಂಗತ್ಯ**". ಈ ಮೂಲಕವಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳ ಮೂಲಕ ಅವರ ಪ್ರತಿಭೆಯನ್ನು ಪ್ರಜ್ವಲಿಸುವಂತೆ ಮಾಡಿ ಪೋಷಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.

### ಕಾಲೇಜಿನ ಎಲ್ಲಾ ವಿಭಾಗದಲ್ಲೂ ಉತ್ಕೃಷ್ಠತೆ, ಜನಮನ್ನಣೆ

ಕಾಲೇಜು ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ ವ್ಯವಸ್ಥೆ, ಸ್ಟೇಶನರಿಗಳನ್ನು ಒಳಗೊಂಡಿದೆ. ಕಂಪ್ಯೂಟರ್ ಲ್ಯಾಬ್ ವ್ಯವಸ್ಥೆಯೂ ಇದ್ದು ಟ್ಯಾಲಿ, ಪೈಥಾನ್ ಅಪ್ಲಿಕೇಶನ್, ಡ್ರೋನ್ ಟೆಕ್ನಾಲಜಿ, ಗ್ರಾಫಿಕ್ ಡಿಸೈನಿಂಗ್ ಮೊದಲಾದ ವಿಷಯಗಳನ್ನು ಕಲಿಸಲಾಗುತ್ತಿದೆ.

ದಿನಪತ್ರಿಕೆಗಳಲ್ಲಿ ಬಂದಂತಹ ಅವಶ್ಯಕ ಮಾಹಿತಿಗಳನ್ನು ಕ್ರೋಢೀಕರಿಸಿ "**ಜ್ಞಾನ ಕಣಜ**" ಎಂಬ ಹೆಸರಿನಿಂದ ನೋಟೀಸ್ ಬೋರ್ಡ್ ಮೂಲಕ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಬಿತ್ತರಿಸಲಾಗುತ್ತದೆ. ಅಲ್ಲದೇ ಕಾಲೇಜಿಗೆ ಸಂಬಂಧಿಸಿದ ಎಲ್ಲ ಅವಶ್ಯಕ ಮಾಹಿತಿಗಳನ್ನು ಪ್ರತಿ ಮಹಡಿಗಳಲ್ಲೂ ನೋಟೀಸ್ ಬೋರ್ಡ್ ಮೂಲಕ ಪ್ರಚುರಪಡಿಸುತ್ತಾರೆ.

**'ಸಂದೇಹ ನಿವಾರಣಾ ಅವಧಿ' [ಡೌಟ್ ಕ್ಲಾರಿಫಿಕೇಶನ್ ಸೆಷನ್]**
ಇದು ಕ್ರಿಯೇಟಿವ್ ಸಂಸ್ಥೆ ಸೃಷ್ಟಿಸಿರುವ ಒಂದು ಪರಿಕಲ್ಪನೆ. ಈ ಸಮಯದಲ್ಲಿ ದಿನಕ್ಕೊಂದರಂತೆ ಆರು ವಿಷಯಗಳಿಗೆ ಸಂಬಂಧಪಟ್ಟ ವಿಷಯ ಶಿಕ್ಷಕರ ಜೊತೆ ವಿದ್ಯಾರ್ಥಿಗಳು ಸಮಯ ಸಂಜೆ 6.15ರಿಂದ 8.30ರ ವರೆಗೆ ಸಂದೇಹವನ್ನು ನಿವಾರಿಸಿಕೊಳ್ಳುವ ವಿಶೇಷ ಅವಧಿ ಇದಾಗಿದೆ. ಆ ಬಳಿಕ ವಿದ್ಯಾರ್ಥಿಗಳಿಗೆ ಸ್ವ ಅಧ್ಯಯನಕ್ಕೆ ಅವಕಾಶವನ್ನು ನೀಡಿದೆ. ಅಲ್ಲದೇ ನಿಧಾನ ಕಲಿಯುವವರಿಗೆ ಸಕಾಲಿಕ ಪರಿಹಾರ ತರಗತಿಗಳನ್ನು ನಡೆಸಲಾಗುತ್ತಿದೆ. ಸಂವಹನ ಇಂಗ್ಲೀಷ್ ತರಗತಿಗಳನ್ನೂ ನಡೆಸಲಾಗುತ್ತಿದೆ.

### ಹೈಟೆಕ್ ಸುರಕ್ಷಿತ ಹಾಸ್ಟೆಲ್ ವ್ಯವಸ್ಥೆ

**'ಆಸರೆ', 'ನೇಸರ', 'ಇಂಚರ', 'ಅಂಬರ'** ಹೆಸರಿನ ವಿದ್ಯಾರ್ಥಿನಿಲಯಗಳಿದ್ದು, ಕಾಲೇಜು ಹಾಗೂ ಹಾಸ್ಟೆಲ್ ಪ್ರಾಂಗಣದ ಎಲ್ಲಾ ಕಡೆಯೂ ಸಿಸಿ ಕ್ಯಾಮರಾ ವ್ಯವಸ್ಥೆಯಿದೆ. ದಿನದ 24 ಗಂಟೆಗಳ ಕಾಲವೂ ಭದ್ರತಾ ಸಿಬ್ಬಂದಿಗಳು ಕರ್ತವ್ಯನಿರತರಾಗಿರುತ್ತಾರೆ. ಕಾಲೇಜು ಕ್ಯಾಂಪಸ್ ಒಳಗಡೆಯೇ ಎಟಿಎಂ ಸೌಕರ್ಯ, ಸೆಲೂನ್ ವ್ಯವಸ್ಥೆ, 24x7 ಯಾವುದೇ ಅಡಚಣೆಯಿಲ್ಲದೆ ವಿದ್ಯುಚ್ಛಕ್ತಿ ಪೂರೈಕೆ, ಕಾಲೇಜು-ಹಾಸ್ಟೆಲ್‌ಗಳ ಪ್ರತೀ ಮಹಡಿಗಳಲ್ಲೂ 24x7 ಕುಡಿಯುವ ನೀರಿನ[ಬಿಸಿನೀರು/ತಣ್ಣೀರು] ಪೂರೈಕೆಯಿದೆ. ಕಾಲೇಜು ಹಾಗೂ ವಿದ್ಯಾರ್ಥಿ ನಿಲಯಗಳು ಲಿಫ್ಟ್ ವ್ಯವಸ್ಥೆಯನ್ನು ಒಳಗೊಂಡಿದೆ. ಬೋಧನಾ ಸಿಬ್ಬಂದಿಗಳ ಕೊಠಡಿಗಳಲ್ಲಿ ಪ್ರತ್ಯೇಕ ಕ್ಯಾಬಿನ್‌ಗಳಿದ್ದು, ಕಾಲೇಜಿನಲ್ಲಿ ಹವಾನಿಯಂತ್ರಕ ವ್ಯವಸ್ಥೆಯನ್ನು ಕೂಡ ಅಳವಡಿಸಲಾಗಿದೆ.

ಸಂಸ್ಥೆಯು ಮೌಲ್ಯಯುತ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ನೀಡುತ್ತಿದ್ದು ಈ ವಿಚಾರದಲ್ಲಿ ರಾಜಿಯನ್ನು ಮಾಡಿಕೊಳ್ಳದೆ ಪ್ರವೇಶ ಬಯಸುವ ಪ್ರತಿ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯ ಮೂಲಕವೇ ಸಂಸ್ಥೆಯಲ್ಲಿ ಸೀಟು ದಕ್ಕಿಸಿಕೊಳ್ಳುವುದು ಈ ಸಂಸ್ಥೆಯ ಪಾರದರ್ಶಕತೆಗೆ ಹಿಡಿದ ಕೈಗನ್ನಡಿಯಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮೊದಲ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುತ್ತಿದ್ದು, ಇದರ ದಕ್ಷತೆಯನ್ನು ನಿರ್ಧರಿಸುವ ಸಲುವಾಗಿ ಪ್ರತಿವಾರ ಈ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷೆಯನ್ನು ನಡೆಸಲಾಗುತ್ತದೆ. ಪರೀಕ್ಷೆ ನಡೆದ ನಾಲ್ಕು ಗಂಟೆ ಅವಧಿಯೊಳಗೆ ಫಲಿತಾಂಶವನ್ನು ವಿದ್ಯಾರ್ಥಿಗಳು ನೋಟೀಸ್ ಬೋರ್ಡ್‌ನಲ್ಲಿ ವೀಕ್ಷಿಸಿದರೆ, ಪೋಷಕರಿಗೆ ಮೊಬೈಲ್ ಸಂದೇಶದ ಮೂಲಕ ರವಾನಿಸಲಾಗುತ್ತದೆ.

ಪ್ರತೀ ತರಗತಿ ಕೋಣೆಗಳಲ್ಲಿ ಸೀಮಿತ ವಿದ್ಯಾರ್ಥಿಗಳನ್ನಷ್ಟೇ ಕೂರಿಸಿದ್ದು, ತರಗತಿಗಳಲ್ಲಿ ಫ್ಯಾನ್ ವ್ಯವಸ್ಥೆ, ಕರಿಹಲಗೆ, PPT ವ್ಯವಸ್ಥೆ ಮತ್ತು ಕರಿಹಲಗೆಗೂ ನವವಿನ್ಯಾಸದ ಬೆಳಕಿನ ವ್ಯವಸ್ಥೆಗಳನ್ನು ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಪ್ರತಿ ಮುಂಜಾನೆ ಯೋಗ ತರಬೇತಿಯನ್ನು ನೀಡಲಾಗುತ್ತದೆ. ಉತ್ತಮ ಕ್ರೀಡಾಂಗಣವಿದ್ದು, ಕ್ರೀಡೆಗೂ ಪ್ರೋತ್ಸಾಹವನ್ನು ನೀಡುತ್ತಾ ನುರಿತ ತರಬೇತುದಾರರಿಂದ

2ನೇ ಪುಟಕ್ಕೆ...

## ಸ|ರಿ|ಗ|ಮ|ಪ|ದ|ನಿ

### ಶಿಕ್ಷಣ ಕ್ಷೇತ್ರದ ನಾವಿನ್ಯ ಚಿಲುಮೆ

ಕರಾವಳಿಯ ಬಹುತೇಕ ಟಾಪ್ ಕಾಲೇಜುಗಳಲ್ಲಿ ಹತ್ತಾರು ವರ್ಷ ಬೋಧನೆ ಮಾಡಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಉತ್ಸಾಹಿ, ನಾವಿನ್ಯತೆಯ ಅತ್ಯುತ್ತಮ ಏಳು ಜನ ಬೋಧಕರಾದ ವಿದ್ವಾನ್ ಗಣಪತಿ ಭಟ್, ಡಾ.ಗಣನಾಥ ಶೆಟ್ಟಿ ಬಿ, ಅಮೃತ್ ರೈ, ಆದರ್ಶ ಎಂ.ಕೆ, ಅಶ್ವತ್ ಎಸ್.ಎಲ್, ವಿಮಲ್‌ರಾಜ್ ಜಿ, ಗಣಪತಿ ಕೆ.ಎಸ್ ರವರು ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಹಾಸನದ ಹೆಚ್.ಕೆ.ಎಸ್. ಪದವಿ ಪೂರ್ವ ಕಾಲೇಜು ಹಾಗೂ ಉಡುಪಿಯ ತ್ರಿಶಾ ಪಿ.ಯು. ಕಾಲೇಜು ಕೂಡಾ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ನಾನಾ ಭಾಗಗಳಿಂದ ಬಂದಿರುವ ವಿದ್ಯಾರ್ಥಿಗಳು ಜ್ಞಾನಾರ್ಜನೆಗೈಯುತ್ತಿದ್ದಾರೆ.



**ಸಂಸ್ಥಾಪಕರು**
**ಕ್ರಿಯೇಟಿವ್ ಶಿಕ್ಷಣ ಸಂಸ್ಥೆಗಳು ಕಾರ್ಕಳ, ಉಡುಪಿ ಜಿಲ್ಲೆ**




ಕ್ರಿಯೇಟಿವ್ ಪುಸ್ತಕ ಮನೆ
ಪುಟಗಳೊಂದಿಗೆ ಪಯಣ...
Karkala +91 96064 74289
Moodbidri +91 90350 61849
www.pustakamane.com

**ಕ್ರಿಯೇಟಿವ್ ನಿನಾದ**

ಪ್ರಕಟಣೆ
**ಕ್ರಿಯೇಟಿವ್ ಪುಸ್ತಕ ಮನೆ**
**#4-64/10, ಆದಿಧನ್ ದುರ್ಗಾ ಎನ್‌ಕ್ಲೇವ್,**
**ಜೋಡುರಸ್ತೆ, ಕಾರ್ಕಳ - 576 117**

**ಪ್ರತಿಗಳಿಗಾಗಿ : +91 96064 74289**

**ಇ-ಮೇಲ್:** ninada@creativeedu.in

ಕ್ರಿಯೇಟಿವ್ ನಿನಾದ ಬಳಗ

**ಗೌರವ ಸಂಪಾದಕರು**
ವಿದ್ವಾನ್ ಗಣಪತಿ ಭಟ್
ಡಾ. ಗಣನಾಥ ಶೆಟ್ಟಿ
ಅಮೃತ್ ರೈ
ಆದರ್ಶ ಎಂ.ಕೆ
ವಿಮಲ್ ರಾಜ್ ಜಿ.
ಗಣಪತಿ ಕೆ.ಎಸ್

**ಪ್ರಧಾನ ಸಂಪಾದಕರು**
ಅಶ್ವತ್ ಎಸ್.ಎಲ್.

**ಸಂಪಾದಕರು**
ರಾಘವೇಂದ್ರ ಬಿ.ರಾವ್ (ಅನು ಬೆಳ್ಳೆ)
ರಾಜೇಶ್ ಶೆಟ್ಟಿ

**ಸಲಹಾ ಮಂಡಳಿ**
ಕಾರ್ಕಳ ● ಶಿವಕುಮಾರ್, ಪ್ರಿಯಾಂಕ ತೀರ್ಥರಾಮ, ವಿನಾಯಕ ಜೋಗ್, ಮಹೇಶ್ ಶೆಣೈ, ಸಂತೋಷ್, ಉಮೇಶ್ ಕೆ., ಅಶನ್ ಗೌಡ, ಪ್ರೇರಣಾ, ನರೇಶ್ ಬಿ.ಆರ್
ಹಾಸನ ● ರಮೇಶ್, ಪ್ರವೀಣ್ ಎಂ.ಜಿ., ಲೋಕೇಶ್ ಪೂಜಾರಿ, ರವಿಶಂಕರ್
ಉಡುಪಿ ● ರಾಮಕೃಷ್ಣ ಹೆಗಡೆ

ಸಂಪಾದಕೀಯ...

## ಹೆಕ್ಕಿದ್ದು ಮುತ್ತಾದರೆ ಮಿಕ್ಕಿದ್ದು ಸರೋವರ

ಸಮಾಜದ ಎಲ್ಲಾ ಸ್ತರದ ವಿದ್ಯಾರ್ಥಿಗಳಿಗೂ ಸುಸಜ್ಜಿತ ವ್ಯವಸ್ಥೆಯಡಿ ಗುಣಾತ್ಮಕ ಶಿಕ್ಷಣ ಸಿಗಬೇಕೆಂಬ ಮಹಾದಾಸೆಯಿಂದ ಪ್ರಾರಂಭವಾದ ಕ್ರಿಯೇಟಿವ್ ಶಿಕ್ಷಣ ಸಂಸ್ಥೆ ಮೂರು ವರ್ಷಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಿ.ಯು ಶಿಕ್ಷಣ ನೀಡುವ ಜೊತೆಗೆ ಅವರ ಕನಸುಗಳಿಗೆ ಬಲಿಷ್ಠ ರೆಕ್ಕೆ ಕಟ್ಟಿ ಸಮಾಜಕ್ಕೆ ನೀಡಿದೆ.

ಏಳು ಜನ ಸಮಾನ ಮನಸ್ಕರಿಂದ ಪ್ರಾರಂಭವಾದ ಸಂಸ್ಥೆಯಲ್ಲಿ ಈಗ 550ಕ್ಕೂ ಹೆಚ್ಚು ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸದೃಢ ಸಮಾಜ ಕಟ್ಟುವ ದಿಕ್ಕಿನಲ್ಲಿ ಬಹುಮುಖ್ಯ ಪಾತ್ರವಹಿಸುವ ಶಿಕ್ಷಣ ವ್ಯವಸ್ಥೆಯನ್ನು ಅತ್ಯಂತ ಕ್ರಿಯಾಶೀಲವಾಗಿ ಹಾಗೂ ಗುಣಾತ್ಮಕವಾಗಿ ನೀಡುವ ಕಾಯಕದಲ್ಲಿ ಕ್ರಿಯೇಟಿವ್ ಅವಿರತ ಶ್ರಮಿಸುತ್ತಿದೆ.

ಸಂಸ್ಥೆಯು ತನ್ನ ಮೊದಲ ದಿನದಿಂದಲೂ ಎಲ್ಲಾ ವಿಭಾಗದಲ್ಲೂ ಅತ್ಯುನ್ನತ ಫಲಿತಾಂಶ ನೀಡುತ್ತಾ ಬಂದಿದ್ದು ಈ ಬಾರಿ ಸಾನ್ವಿ ರಾವ್ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಗಳಿಸಿಕೊಂಡಿದ್ದು ಮತ್ತೊಮ್ಮೆ ಸಂಸ್ಥೆಯ ಗುಣಾತ್ಮಕತೆ ಈ ನಾಡಿಗೆ ತೆರೆದಿಟ್ಟಂತಾಗಿದೆ.

ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ವಿದ್ಯಾರ್ಥಿಗಳ ಯಶಸ್ಸು, ಕಲಿಕೆಯಲ್ಲಿ ಅತೀ ಹಿನ್ನಡೆಯಿಂದ ಬಂದವರು ಇಲ್ಲಿನ ಎರಡು ವರ್ಷದ ಶಿಕ್ಷಣದಿಂದ ಗಳಿಸಿಕೊಳ್ಳುವ ಅತೀ ಹೆಚ್ಚು ಅಂಕಗಳು ನಮ್ಮೆಲ್ಲಾ ಸಹೋದ್ಯೋಗಿಗಳ ನಿತ್ಯ ಶ್ರಮಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಸುಂದರ ನಾಳೆಯ ಕನಸು ಕಂಡ ಪ್ರತೀ ವಿದ್ಯಾರ್ಥಿಗೂ ಹೈಟೆಕ್ ಶಿಕ್ಷಣ ದೊರಕಬೇಕು, ತನ್ನ ಮನೆಯ ಬಡತನದಿಂದಾಗಿ ಮೌಲ್ಯಯುತ ಶಿಕ್ಷಣ ವಂಚಿತವಾಗಬಾರದೆಂಬ ಆಲೋಚನೆಯೊಂದಿಗೆ ನಾವು ರೂಪಿಸಿದ **'ಕ್ರಿಯೇಟಿವ್ ಹೊಂಗಿರಣ'** ಅನೇಕ ಬಡತನದ ಪ್ರತಿಭೆಗಳಿಗೆ ಬೆಳಕಾಗಿದೆ. **'ಪುಸ್ತಕ ಪೋಷಕ ಯೋಜನೆ'** ಹಲವಾರು ಹಳ್ಳಿಯ ವಿದ್ಯಾರ್ಥಿಗಳ ಬಹುದೊಡ್ಡ ಆಸರೆಯಾಗಿದೆ ಎಂಬುದು ನಮಗೆ ಬಹಳ ಸಂತೃಪ್ತಿ ನೀಡಿದೆ.

ಶಿಕ್ಷಣದ ಜೊತೆಗೆ ಸಂಸ್ಥೆಯಲ್ಲಿ ನಿರಂತರ ಆಯೋಜಿಸುವ ಕಲೆ, ಸಾಹಿತ್ಯ, ಸಂಸ್ಕೃತಿ ಬಿಂಬಿಸುವಂತಹ ಹಲವಾರು ಕ್ರಿಯಾಶೀಲ ಕಾರ್ಯಕ್ರಮಗಳು ಮಕ್ಕಳ ಬೌದ್ಧಿಕ ಶಕ್ತಿಗೆ ಪೂರಕವಾಗಿ ನಿಂತಿವೆ. ಸದಾ ಬೆಳೆಯುವ ಮನಸ್ಸುಗಳಲ್ಲಿ ಮೌಲ್ಯಯುತ ಚಿಂತನೆಗಳನ್ನು ನೀಡುತ್ತಿದೆ. ವಿದ್ಯಾರ್ಥಿಗಳನ್ನು ತನ್ನ ಮನೆಯ ಮಕ್ಕಳಂತೆ ಪೋಷಿಸುವ ನಿಲಯ ಪಾಲಕರು ವಸತಿ ನಿಲಯವನ್ನು ನಿಜಾರ್ಥದಲ್ಲಿ ಮನೆಯಾಚೆಗಿನ 'ಆಸರೆ'ಯನ್ನಾಗಿಸಿ, ಬದುಕು ಬೆಳಗಿಸುವ 'ನೇಸರ'ವನ್ನಾಗಿಸಿ, ಉತ್ಸಾಹ ತುಂಬುವ 'ಇಂಚರ'ವನ್ನಾಗಿಸಿ, ಸಾಧನೆಯ 'ಅಂಬರ'ವೇರುವಂತೆ ಪೋಷಿಸುತ್ತಿದ್ದಾರೆ.

ಕೇವಲ ಮೂರೇ ವರ್ಷದಲ್ಲಿ ಸಂಸ್ಥೆ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದು ಹಲವಾರು ವಿಭಿನ್ನ ಸಾಧನೆಯಲ್ಲಿ ಹೊಸ ಮೈಲುಗಲ್ಲನ್ನೇ ಸೃಷ್ಟಿಸಿದೆ. ನೀಟ್‌ನಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ಮೆಡಿಕಲ್ ಸೀಟ್ ಪಡೆದುಕೊಂಡದ್ದು ಮಾತ್ರವಲ್ಲದೇ, ದೇಶದ ಅತ್ಯುನ್ನತ ಮೆಡಿಕಲ್ ಸಂಸ್ಥೆ AIIMS, JIPMERಗೆ ಆಯ್ಕೆಯಾಗಿದ್ದು, ಜೆಇಇ ವಿದ್ಯಾರ್ಥಿಗಳು ಐಐಟಿಗೆ ಆಯ್ಕೆಯಾಗಿದ್ದು ಸಂಸ್ಥೆ ಆರಂಭದ ವರ್ಷಗಳಲ್ಲೇ ಸಾಧನೆಯ ಗರಿಮೆ ಬೆಳೆಸಿಕೊಂಡದ್ದಕ್ಕೆ ಅತ್ಯುತ್ತಮ ನಿದರ್ಶನಗಳಾಗಿವೆ.

ಸಿಎ ಫೌಂಡೇಶನ್, ಸಿಎಸ್‌ಇಇಟಿ ಪರೀಕ್ಷೆಯಲ್ಲಿ ಅತೀ ಹೆಚ್ಚು ವಾಣಿಜ್ಯ ವಿದ್ಯಾರ್ಥಿಗಳು ತೇರ್ಗಡೆ ಯಾಗುವ ಮೂಲಕ ವಾಣಿಜ್ಯ ವಿಭಾಗವೂ ಅತ್ಯುತ್ತಮ ಫಲಿತಾಂಶ ನೀಡಿದೆ. ಸತತ ಮೂರು ವರ್ಷವೂ ಶೇ. 100 ಫಲಿತಾಂಶ ಗಳಿಸುವ ಜೊತೆಗೆ ಎಲ್ಲರೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುವುದು ಸಂಸ್ಥೆಯ ನಿರಂತರ ಶ್ರಮದ ಪ್ರತೀಕ.

ಸಮಾಜಕ್ಕೆ ಒಳಿತನ್ನು ಬಯಸುವ **'ಕ್ರಿಯೇಟಿವ್ ಪುಸ್ತಕಮನೆ'** ನಿರ್ಮಾಣ ಕ್ರಿಯೇಟಿವ್‌ನ ಮತ್ತೊಂದು ಮೈಲುಗಲ್ಲು. ನೂರಾರು ಸಾಧನೆಯ ತೃಪ್ತಿ ಇದ್ದರೂ ಅಲ್ಪ ಅವಧಿಯಲ್ಲಿ ಸಾಧಿಸಿದ್ದು ಮುತ್ತಾದರೇ ಇನ್ನೂ ಶ್ರಮಿಸಬೇಕಾದ ದಾರಿ ಸಾಗರದಷ್ಟಿದೆ.

ಈ ಪಯಣದಲ್ಲಿ ಮುಂದೆಯೂ ಇಂತಹ ನೂರಾರು ಒಳಿತಿಗೆ ದೇವರ ಶ್ರೀರಕ್ಷೆಯೊಂದಿಗೆ ನಿಮ್ಮ ಬೆಂಬಲವೂ ನಮ್ಮೊಂದಿಗೆ ಇರುವುದೆಂಬ ಬೆಚ್ಚಗಿನ ಭಾವದೊಂದಿಗೆ...



**ಅಶ್ವತ್ ಎಸ್.ಎಲ್.**
**ಪ್ರಧಾನ ಸಂಪಾದಕರು,**
ಕ್ರಿಯೇಟಿವ್ ನಿನಾದ, ಕಾರ್ಕಳ

**...1ನೇ ಪುಟದಿಂದ**

ತರಬೇತಿಯನ್ನು ಕೊಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಬಿಡುವಿನ ವೇಳೆಯಲ್ಲಿ ಕಾಫಿ, ಟೀ ಸೇರಿದಂತೆ ಎಲ್ಲಾ ತಿನಿಸುಗಳನ್ನು ಸವಿಯುವ ಉದ್ದೇಶದಿಂದ **'ಕ್ರಿಯೇಟಿವ್ ಕಾಫಿ ಕ್ಲಬ್'** ಅನ್ನು ತೆರೆಯಲಾಗಿದೆ. ವಿದ್ಯಾರ್ಥಿಗಳ ವೈಯಕ್ತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾಲೋಚಕರಿಂದ ಆಪ್ತ ಸಮಾಲೋಚನೆ ಯನ್ನು ಮಾಡಿ ಪರಿಹಾರ ಒದಗಿಸುವ ಕಾರ್ಯವನ್ನು ಮಾಡುತ್ತಾರೆ. **'ಕ್ರಿಯೇಟಿವ್ ಯಕ್ಷಾರಾಧನಮ್'** ವತಿಯಿಂದ ಯಕ್ಷಗಾನದಲ್ಲಿ ಆಸಕ್ತಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಉಚಿತ ಯಕ್ಷಗಾನ ಕಲಿಕೆಯ ವ್ಯವಸ್ಥೆಯೂ ಇದೆ. ವಿದ್ಯಾರ್ಥಿಗಳಿಗೆ ಅಂತರ್ ಕಾಲೇಜ್ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ವರ್ಷಕ್ಕೆ 2 ಅಥವಾ ಮೂರು ಬಾರಿ ಪಾಲಕ-ಶಿಕ್ಷಕ ಸಭೆಯನ್ನು ಕರೆಯಲಾಗುತ್ತದೆ.

### 'ಕ್ರಿಯೇಟಿವ್ ಹೊಂಗಿರಣ'

ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳನ್ನು ಗುರುತಿಸಿ, ಬೆಳೆಸುವ ನಿಟ್ಟಿನಲ್ಲಿ **'ಕ್ರಿಯೇಟಿವ್ ಹೊಂಗಿರಣ'** ಎಂಬ ಯೋಜನೆಯನ್ನು ರೂಪಿಸಿದ್ದು, ಅತ್ಯಂತ ಕಷ್ಟ ಕಾರ್ಪಣ್ಯದಿಂದ ಬಳಲುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಶಿಕ್ಷಣವನ್ನು ನೀಡುವ ಜೊತೆಗೆ ಅವರ ಮುಂದಿನ ಶಿಕ್ಷಣಕ್ಕೂ ನೆರವಾಗುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದು ಇದು ನೂರಾರು ಪ್ರತಿಭಾನ್ವಿತ ಬಡ ಮಕ್ಕಳಿಗೆ ಒಂದು ಆಶಾಕಿರಣವಾದ ಯೋಜನೆಯಾಗಿದೆ.

ವಿದ್ಯಾರ್ಥಿಗಳ ಸುಲಭಕ್ಕೋಸ್ಕರ ಲಾಂಡ್ರಿ ವ್ಯವಸ್ಥೆಯೂ ಇದೆ. ಪೋಷಕರನ್ನು ಫೋನ್ ಮೂಲಕ ಸಂಪರ್ಕಿಸಲು ಸ್ಮಾರ್ಟ್ ಕಾರ್ಡ್ ವ್ಯವಸ್ಥೆಯಿದೆ. ಅನಾರೋಗ್ಯದ ಸಂದರ್ಭದಲ್ಲಿ ಕಾಲೇಜು ವಾಹನಗಳಲ್ಲಿಯೇ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುವ ಸುರಕ್ಷಿತ ವ್ಯವಸ್ಥೆಯಿದೆ. ಕ್ಯಾಂಪಸ್‌ನಲ್ಲೇ ವೈದ್ಯರ ತಪಾಸಣೆಗೂ ಅನುವು ಮಾಡಲಾಗಿದೆ. ವಿದ್ಯಾರ್ಥಿಗಳಿಗೆ 45 ದಿನಗಳಿಗೊಮ್ಮೆ ಪೋಷಕರೊಂದಿಗೆ 1 ದಿನದ ಹೊರಸಂಚಾರಕ್ಕೂ ಅನುವು ಮಾಡಿಕೊಡಲಾಗಿದೆ. ಕಾರ್ಕಳದ ಆಸುಪಾಸಿನ ವಿದ್ಯಾರ್ಥಿಗಳಿಗೆ ಕಾಲೇಜು ವಾಹನಗಳ ಸೌಲಭ್ಯವೂ ಇದೆ.

ಸುಸಜ್ಜಿತ ಭೋಜನಾಲಯಗಳನ್ನು ಹೊಂದಿರುವ ಸಂಸ್ಥೆಯು ಅನುಭವಿ ಅಡುಗೆಯವರಿಂದ ಶುಚಿ-ರುಚಿಯಾದ ಅಡುಗೆಯನ್ನು ಸಿದ್ಧಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಉಣಬಡಿಸಲಾಗುತ್ತದೆ. ಕಾಲೇಜ್ ಕ್ಯಾಂಪಸ್ ಗಾರ್ಡನ್ ಹಾಗೂ ಕಾರಂಜಿಯ ವ್ಯವಸ್ಥೆಯನ್ನು ಹೊಂದಿದ್ದು ಆಕರ್ಷಣೀಯವಾಗಿದೆ. ಕಾಲೇಜಿನ ಮೇಲಿನ ಮಹಡಿಯಲ್ಲಿ ಸುಂದರ ರಂಗಮಂಟಪವೂ ಇದೆ.

**'ಕ್ರಿಯೇಟಿವ್ ಮೀಡಿಯಾ'**ದ ವತಿಯಿಂದ ಛಾಯಾಗ್ರಹಣ ಮತ್ತು ಸುದ್ದಿ ಬಿತ್ತರಣೆಯನ್ನು ಮಾಡಲಾಗುತ್ತದೆ. ದೀಪಾವಳಿ ಆಚರಣೆ, ಗಣೇಶ ಚತುರ್ಥಿ, ರಾಷ್ಟ್ರ ನಾಯಕರುಗಳ ಜನ್ಮ ದಿನಾಚರಣೆ, ಕ್ರಿಸ್ಮಸ್ ಆಚರಣೆ ಹಾಗೂ ಕನ್ನಡ ನಾಡು-ನುಡಿಯನ್ನು ಬೆಳೆಸಿ ಗೌರವಿಸುವ ನಿಟ್ಟಿನಲ್ಲಿ **'ಕ್ರಿಯೇಟಿವ್ ನುಡಿಹಬ್ಬ'** ಎಂಬ ಅದ್ದೂರಿ ಕಾರ್ಯಕ್ರಮವನ್ನು ಸಂಯೋಜಿಸಲಾಗುತ್ತದೆ.

ವಿದ್ಯಾರ್ಥಿಗಳ ಪ್ರತಿಭಾ ಅನಾವರಣಕ್ಕಾಗಿ ವಾರ್ಷಿಕ ಸಂಚಿಕೆ **'ಸಪ್ತಸ್ವರ'** ಹಾಗೂ ತ್ರೈಮಾಸಿಕ ಪತ್ರಿಕೆಯಾದ **'ನಿನಾದ'** ಸಂಚಿಕೆಯಿದೆ. "**ಕ್ರಿಯೇಟಿವ್ ಪುಸ್ತಕ ಮನೆ**"ಯು ಕರಾವಳಿಯ ಅತಿದೊಡ್ಡ ಪುಸ್ತಕ ಮಳಿಗೆಗಳಲ್ಲಿ ಒಂದಾಗಿದ್ದು, ಕಾರ್ಕಳ ಹಾಗೂ ಮೂಡುಬಿದಿರೆಯಲ್ಲಿ ತನ್ನ ಶಾಖೆಗಳನ್ನು ಹೊಂದಿದೆ. ಭವಿಷ್ಯದಲ್ಲಿ ಬೇರೆ ಬೇರೆ ಕಡೆ ತನ್ನ ಶಾಖೆಗಳನ್ನು ಹಬ್ಬಿಕೊಂಡು ಪ್ರತಿ ತಾಲೂಕಿನ ಜನರಿಗೂ ದಕ್ಷ ಮಟ್ಟದಲ್ಲಿ ಅತೀ ಕಡಿಮೆ ಬೆಲೆಗೆ ಪುಸ್ತಕಗಳನ್ನು ತಲುಪಿಸುವ ಯೋಜನೆಯನ್ನು ಹೊಂದಿದೆ. ಈಗಾಗಲೇ "**ಮೊಬೈಲ್ ಬಿಡಿ ಪುಸ್ತಕ ಹಿಡಿ**" ಯೋಜನೆಯನ್ನು ಹಮ್ಮಿಕೊಂಡಿದೆ. ಪುಸ್ತಕ ಮನೆಯ ಓದುವ ಕೋಣೆಯಲ್ಲಿ ಉಚಿತವಾಗಿ ಪುಸ್ತಕಗಳನ್ನು ಓದುವ ಅವಕಾಶವೂ ಇದೆ. ಅಲ್ಲದೇ ಸರಕಾರಿ ಶಾಲಾ ಮಕ್ಕಳಿಗೆ ಪುಸ್ತಕಗಳನ್ನು ಉಚಿತವಾಗಿ ತಲುಪಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಸಿದ್ಧ ಲೇಖಕರ ಪುಸ್ತಕಗಳೆಲ್ಲವೂ ಇಲ್ಲಿ ಲಭ್ಯವಿದ್ದು, ಯುವ ಬರಹಗಾರರಿಗೆ ಪುಸ್ತಕಗಳನ್ನು ಪ್ರಕಟಿಸಲು ಕ್ರಿಯೇಟಿವ್ ಪುಸ್ತಕ ಮನೆ ಪ್ರಕಾಶನವು ಸ್ಫೂರ್ತಿಯಾಗಿದೆ. ಎಲ್ಲಾ ಬಗೆಯ ಸ್ಟೇಷನರಿ ವಸ್ತುಗಳು ಹಾಗೂ ಉಡುಗೊರೆಗಳು, ಮಕ್ಕಳ ಆಟಿಕೆಗಳು ಇಲ್ಲಿ ಲಭ್ಯವಿದೆ. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕರಾದ ಅಶ್ವತ್ ಎಸ್.ಎಲ್‌ರವರು ಬರೆದ **'ಅರಿವಿನ ದಾರಿ'** ಎಂಬ ಪುಸ್ತಕವು ವಿದ್ಯಾರ್ಥಿಗಳಿಗೂ, ಪೋಷಕರಿಗೂ, ಶಿಕ್ಷಕರಿಗೂ ಒಂದು ಒಳ್ಳೆಯ ಶಿಕ್ಷಣ ಮಾರ್ಗದರ್ಶಿ ಪುಸ್ತಕವಾಗಿದ್ದು ಪ್ರಕಟಗೊಂಡ ಒಂದೇ ತಿಂಗಳಿನಲ್ಲಿ 2000 ಪ್ರತಿಗಳು ಓದುಗರ ಕೈಗೆ ತಲುಪಿ ಮರುಮುದ್ರಣಗೊಂಡಿರುವುದು ಶ್ಲಾಘನೀಯ ವಿಚಾರವಾಗಿದೆ.

### ವಾಣಿಜ್ಯ ವಿದ್ಯಾರ್ಥಿಗಳಿಗೆ ವಾಸ್ತವಿಕ ಬದುಕು ಕಲಿಸುವ ಕ್ರಿಯಾಶೀಲ ಯೋಜನೆಗಳು

'ನನಗಲ್ಲ ನಿನಗೆ' [NOT ME BUT YOU] ಎನ್ನುವ ಧ್ಯೇಯ ವಾಕ್ಯದಿಂದ ಆರಂಭವಾದ ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು, ಸಂಯಮ, ಉತ್ತಮ ನಾಯಕತ್ವ, ಸಹಬಾಳ್ವೆ, ಭ್ರಾತೃತ್ವ, ಭಾವೈಕ್ಯತೆ ಇತ್ಯಾದಿ ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುವುದು. ಅನುಭವದ ಮೂಲಕ ಶಿಕ್ಷಣವನ್ನು ನೀಡುತ್ತಾ ಮಕ್ಕಳಿಗೆ ಸೇವೆಯ ಮೂಲಕ ಶಿಕ್ಷಣ ಹಾಗೂ ಶಿಕ್ಷಣದ ಮೂಲಕ ಸೇವೆಯನ್ನು ನೀಡುವ ಕಾರ್ಯಕ್ರಮಗಳನ್ನು ಎನ್.ಎಸ್.ಎಸ್ ಘಟಕದ ಮೂಲಕ ಆಯೋಜಿಸಲಾಗುತ್ತದೆ. ಸ್ವಚ್ಛ ಭಾರತ ಕಾರ್ಯಕ್ರಮ ಅಂಗವಾಗಿ ಎನ್.ಎಸ್.ಎಸ್. ಸ್ವಯಂಸೇವಕರು ಸ್ವಚ್ಛತಾ ಆಂದೋಲನದಲ್ಲಿ ಪಾಲ್ಗೊಳ್ಳುತ್ತಾರೆ. "ಕ್ರಿಯೇಟಿವ್ ಕೆಸರ್ಡೊಂಜಿ ದಿನ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ ಕೃಷಿ ಮತ್ತು ದುಡಿಮೆಯ ಮಹತ್ವವನ್ನು ತಿಳಿಸಲಾಗುತ್ತದೆ. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕೈಗಾರಿಕಾ ವಲಯಗಳ ಭೇಟಿಯನ್ನು ಮಾಡಿಸಲಾಗುತ್ತದೆ.

**'ವಸುದೈವ ಕುಟುಂಬಕಂ'** ಪರಿಕಲ್ಪನೆಯಲ್ಲಿ ಕಾಲೇಜಿನ ವಾರ್ಷಿಕೋತ್ಸವ ಕಾರ್ಯಕ್ರಮ **'ಆವಿರ್ಭವ'**ವನ್ನು ಹಮ್ಮಿಕೊಳ್ಳಲಾಗುತ್ತದೆ. **'ಗುರುವಂದನೆ'** ಕಾರ್ಯಕ್ರಮವನ್ನು ಹಮ್ಮಿಕೊಂಡು ಶಿಕ್ಷಕರಿಗೆ ಗೌರವಾರ್ಪಣೆಯನ್ನು ಸಲ್ಲಿಸುತ್ತಾರೆ. ಪ್ರತಿಭಾ ಪುರಸ್ಕಾರದ ಮೂಲಕ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಗುತ್ತದೆ. ಪ್ರತಿವರ್ಷ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಕಳ, ಉಡುಪಿ ಹಾಗೂ ಹಾಸನದ ಉಪನ್ಯಾಸಕ ವರ್ಗದವರನ್ನು ಸೇರಿಸಿ **'ಕ್ರಿಯೇಟಿವ್ ಉನ್ನತಿ'** ಪುನಶ್ಚೇತನ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳ ಸರ್ವಾಂಗೀಣ ವಿಕಸನಕ್ಕೆ ಆಡಳಿತ ಮಂಡಳಿ, ಬೋಧಕ ವರ್ಗ, ನಿಲಯ ಪಾಲಕರು, ಬೋಧಕೇತರ ವರ್ಗದವರು ತಮ್ಮದೇ ಆದ ಅವಿರತ ಶ್ರಮವನ್ನು ನಿರ್ವಹಿಸುತ್ತಿದ್ದು ಮನೆಮಕ್ಕಳಂತೆ ಪೋಷಿಸಿ ಜವಾಬ್ದಾರಿ ವಹಿಸುತ್ತಿದ್ದಾರೆ. ಹೀಗೆ ಕಾಲೇಜಿನ ಶೈಕ್ಷಣಿಕ ಸಾಧನೆಯಿಂದಾಗಿ "ಕ್ರಿಯೇಟಿವ್" ಎಂಬ ಹೆಸರು ಜನಮಾನಸದಲ್ಲಿ ದಟ್ಟವಾಗಿ ಅಚ್ಚೊತ್ತುವಂತಾಗಿದೆ.

"ಸತ್ಯ, ಸೌಂದರ್ಯ ಮತ್ತು ಸದ್ಗುಣಗಳ ಪ್ರಜ್ಞೆಯೇ ಶಿಕ್ಷಣ" ಎಂಬ ಗಾಂಧಿಯವರ ಉಕ್ತಿಯಂತೆ, 'ಸತ್ಯ'ವನ್ನು ಶಿಕ್ಷಣದ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಆಶಯ ಹೊತ್ತ ಸಂಸ್ಥೆ ನಮ್ಮದು. 2 ಸಾವಿರಕ್ಕೂ ಹೆಚ್ಚು ಮಕ್ಕಳ ವಿದ್ಯಾರ್ಜನೆಗೆ ನೆಲೆಯಾಗಿ, ಮಕ್ಕಳು ಮಾನವರಾಗಿ, ನಾಗರಿಕರಾಗಿ ಬಾಳುವ ನಿಜದನಿಯಾಗಿದೆ. "ಮಕ್ಕಳ ಮನಸ್ಸು ಗುಜರಿ ತುಂಬುವ ಚೀಲಗಳಾಗದೆ ಬತ್ತ ಬೆಳೆವ ಗದ್ದೆಗಳಾಗಲಿ" ಎಂಬ ಕುವೆಂಪು ಅವರ ಉಕ್ತಿಯಂತೆ ಬೆಳಕಿನ ಬೀಜಗಳನ್ನು ಬಿತ್ತುವ ಕಾಯಕ ನಿರಂತರವಾಗಿ ಇಲ್ಲಿ ನಡೆಯುತ್ತಿದೆ.

"ಶಿಕ್ಷಣವೆಂಬುದು ಬರಿಯ ಓದಲ್ಲ,
ಅದು ಮಾನವತೆಯ ವಿಕಾಸ."



**ಪ್ರಿಯಾಂಕ ತೀರ್ಥರಾಮ**
ಮರ್ಕಂಜ, ಸುಳ್ಯ
ಕನ್ನಡ ಉಪನ್ಯಾಸಕಿ
ಕ್ರಿಯೇಟಿವ್ ಪ.ಪೂ.ಕಾಲೇಜು, ಕಾರ್ಕಳ

ಕಾವ್ಯೋಕ್ತಿ | ಹಗುರಾದ ಬಾಳಿಗೂ ಹಿರಿದಾದ ಧ್ಯೇಯವಿದೆ, ನಗೆಗೆ ಗುರಿ ಏನಿಲ್ಲ ಸೃಷ್ಟಿಯೊಳಗೆ - ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ



### ಕಾರ್ಕಳ ಕ್ರಿಯೇಟಿವ್ ವಿದ್ಯಾಸಂಸ್ಥೆಯಲ್ಲಿ

## ರಾಷ್ಟ್ರ ಚೇತನ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ



**ಕಾರ್ಕಳ:** ಸ್ವಾಮಿ ವಿವೇಕಾನಂದರ ಚಿಂತನೆಗಳು ಭಾರತ ಮಾತ್ರವಲ್ಲ ವಿಶ್ವವ್ಯಾಪಿಯಾದುದು. ಯುವಕರು ದೇಶದ ಭವಿಷ್ಯ ಉಜ್ವಲಗೊಳಿಸುವ ಸಾಮರ್ಥ್ಯ ಹೊಂದಿದ್ದಾರೆ. ಆತ್ಮೋದ್ಧಾರ ಮಾರ್ಗವೇ ಜಗವನ್ನು ಹಾಗೂ ಮನುಷ್ಯರನ್ನು ಅರಿಯಲು ಇರುವ ದಾರಿ. ಯುವಕರ ಕಣ್ಮಣಿಯಾಗಿ, ಸಿಡಿಲ ಸಂತನಾಗಿ ವಿಶ್ವವೇ ಭಾರತದ ಕಡೆಗೆ ತಿರುಗಿ ನೋಡುವಂತೆ ಮಾಡಿದ ಮಹಾತ್ಮ ಸ್ವಾಮಿ ವಿವೇಕಾನಂದರು. ಎಲ್ಲರಿಗೂ ಸ್ಫೂರ್ತಿಯ ಚಿಲುಮೆ ಎಂದು ಗಣಿತ ಉಪನ್ಯಾಸಕ ಪ್ರದೀಪ್ ಅಂಚನ್ ಕಾರ್ಕಳದ ಕ್ರಿಯೇಟಿವ್ ಕಾಲೇಜಿನಲ್ಲಿ 'ಯುವ ಸಪ್ತಾಹ'ದ ಅಂಗವಾಗಿ ನಡೆದ ವಿವೇಕಾನಂದರ ಜನ್ಮದಿನಾಚರಣೆಯಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ತಿಳಿಸಿದರು.

ಜಗತ್ತು ಭಾರತದ ಕಡೆಗೆ ಕೀಳಾಗಿ ಕಾಣುತ್ತಿರುವಾಗ ಭಾರತದ ಅಂತಃಶಕ್ತಿ, ಆತ್ಮಜ್ಞಾನ, ಆಧ್ಯಾತ್ಮ ಕೊಡುಗೆಗಳ ಕುರಿತು ಪಾಶ್ಚಿಮಾತ್ಯರ ಕಣ್ಣು ತೆರೆಸಿ, ಶ್ರೇಷ್ಠ ಜ್ಞಾನ ಪರಂಪರೆ, ಮೌಲ್ಯಗಳ ಭಂಡಾರ ಭಾರತ ಎಂಬುದನ್ನು ತಿಳಿಸಿಕೊಟ್ಟವರು ವಿವೇಕಾನಂದರು. ಪುಣ್ಯಭೂಮಿ ಭಾರತದ ಅಣು ಅಣುವಿನಲ್ಲೂ ದೈವತ್ವವಿದೆ. ಇಂತಹ ಉತ್ಕೃಷ್ಟ ಯೋಚನೆ ಹೊಂದಿದ್ದ. ಋಷಿ ಮುನಿಗಳ ತಪಸ್ಸಿನಿಂದ ಭರತಭೂಮಿ ಇನ್ನಷ್ಟು ಪವಿತ್ರಗೊಂಡಿತ್ತು. ಆದ್ದರಿಂದ ಭಾರತೀಯರಾದ ನಾವೆಲ್ಲರೂ ವಿವೇಕಾನಂದರ ಜೀವನಾದರ್ಶಗಳನ್ನು ಅಳವಡಿಸಿಕೊಳ್ಳೋಣ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಕ್ರಿಯೇಟಿವ್ ಕಾಲೇಜಿನ ಸಹ ಸಂಸ್ಥಾಪಕರಾದ ವಿದ್ವಾನ್ ಗಣಪತಿ ಭಟ್ ಮಾತನಾಡಿ ನೈತಿಕ ಶಕ್ತಿ, ಉತ್ತಮ ವಿಚಾರಧಾರೆಗಳು, ಎಲ್ಲರೂ ಸಮಾನರು ಹಾಗೂ ಮನುಷ್ಯತ್ವದಲ್ಲಿ ದೇವರನ್ನು ಕಂಡವರು ವಿವೇಕಾನಂದರು. ಅವರ ಮಾತುಗಳು ನಮ್ಮ ನಡೆ-ನುಡಿಯಲ್ಲಿ ಪ್ರೇರಣೆ ಪಡೆದು ಹಾಗೆಯೇ ಜೀವಿಸುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಎನ್. ಎಸ್. ಎಸ್. ಸಂಯೋಜನಾಧಿಕಾರಿ ಉಮೇಶ್, ಉಪನ್ಯಾಸಕರಾದ ಚಂದ್ರಕಾಂತ್, ರಾಮಕೃಷ್ಣ ಹೆಗಡೆ, ವಾಣಿಜ್ಯ ವಿಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಕು. ಸಂಹಿತಾ ಹೆಬ್ಬಾರ್ ವಂದಿಸಿದರು. ಕು. ಶ್ರದ್ಧಾ ಅಂಗಡಿ ಕಾರ್ಯಕ್ರಮ ನಿರೂಪಿಸಿದರು.

## 75ನೇ ಗಣತಂತ್ರ ದಿನ ಆಚರಣೆ



**ಕಾರ್ಕಳ:** ಕಾರ್ಕಳದ ಹಿರ್ಗಾನದಲ್ಲಿರುವ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ 75 ನೇ ಗಣರಾಜ್ಯ ದಿನಾಚರಣೆ ನಡೆಯಿತು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಮಾತನಾಡಿ ಭಾರತೀಯ ಪ್ರಜೆಗಳಾಗಿ ನಾವು ಗಣರಾಜ್ಯದ ಘನತೆಯನ್ನು ಉಳಿಸುವ ಕಾರ್ಯ ಮಾಡಬೇಕು ಎಂದು ಗಣರಾಜ್ಯ ದಿನದ ಸಂದೇಶ ನೀಡಿದರು.

ಈ ಸಂದರ್ಭದಲ್ಲಿ ಕ್ರಿಯೇಟಿವ್ ನ ಸಹಸಂಸ್ಥಾಪಕರಾದ ಅಶ್ವತ್ ಎಸ್. ಎಲ್, ಉಪನ್ಯಾಸಕ ವೃಂದ ಹಾಗೂ ಬೋಧಕೇತರ ವರ್ಗದವರು ಉಪಸ್ಥಿತರಿದ್ದರು. ಉಪನ್ಯಾಸಕ ವಿನಾಯಕ ಜೋಗ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ಗ್ರೀನ್ ಸೋಲ್ ಹಾಗೂ ಕ್ರಿಯೇಟಿವ್ ವಿದ್ಯಾ ಸಂಸ್ಥೆ ಸಹಯೋಗದಲ್ಲಿ

## ಬೃಹತ್ ಪಾದರಕ್ಷೆ ಸಂಗ್ರಹ ಅಭಿಯಾನ



**ಕಾರ್ಕಳ:** ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, "ಗ್ರೀನ್ ಸೋಲ್" ಸಂಸ್ಥೆಯ ಸಹಕಾರದೊಂದಿಗೆ ಸಾರ್ವಜನಿಕರಿಂದ ಬಳಸಿದ ಪಾದರಕ್ಷೆಗಳನ್ನು ಸಂಗ್ರಹಿಸಿ ಅದನ್ನು ಉನ್ನತ ತಂತ್ರಜ್ಞಾನದ ಮೂಲಕ ಮರುಬಳಕೆ ಮಾಡಿ ಶಾಲೆಯ ಬಡಮಕ್ಕಳಿಗೆ ಹಂಚುವ ವಿನೂತನ ಮತ್ತು ಮಾದರಿ ಕಾರ್ಯಕ್ರಮ ನವೆಂಬರ್ 29 ರಂದು ನಡೆಯಿತು. ಉಡುಪಿ, ದಕ್ಷಿಣಕನ್ನಡ ಜಿಲ್ಲೆಗಳನ್ನೊಳಗೊಂಡ ಅತ್ಯಂತ ಬಡತನ ಹೊಂದಿದ ಶಾಲೆಯ ಮಕ್ಕಳಿಗೆ ಪಾದರಕ್ಷೆಯನ್ನು ಒದಗಿಸುವ ಅಭಿಯಾನ "ಗ್ರೀನ್ ಸೋಲ್" ಎಂಬ ಸಂಸ್ಥೆಯೊಂದಿಗೆ ಸೇರಿ ನಡೆಸಲಾಗುತ್ತಿದೆ. ಅವಿನಾಶ್ ಕಾಮತ್‌ರವರ ಕನಸಿನ ಯೋಜನೆಗೆ ಕ್ರಿಯೇಟಿವ್ ವಿದ್ಯಾ ಸಂಸ್ಥೆಯೂ ಕೈ ಜೋಡಿಸಿದ್ದು ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹಸಂಸ್ಥಾಪಕರಾದ ಅಶ್ವತ್ ಎಸ್. ಎಲ್ ಭಾಗಿಯಾಗಿ ಮಾತನಾಡಿ ಗ್ರಾಮೀಣ ಪ್ರದೇಶದ ಕನಿಷ್ಟ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳಲಾಗದ ವಿದ್ಯಾರ್ಥಿಗಳಿಗೆ ಈ ಯೋಜನೆ ವರದಾನವಾಗಲಿದೆ. "ನಡಿಗೆ" ಯೋಜನೆಯಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಕಾರ್ಕಳ ಪರಿಸರದಿಂದ ಒಂದು ಸಾವಿರಕ್ಕೂ ಅಧಿಕ ಪಾದರಕ್ಷೆಗಳ ಜೊತೆಯನ್ನು "ಗ್ರೀನ್ ಸೋಲ್" ಸಂಸ್ಥೆಗೆ ಹಸ್ತಾಂತರಿಸಲಾಯಿತು.

## ಕ್ರಿಯೇಟಿವ್ ನಿನಾದ

### ಸಂಚಿಕೆ-6 ಬಿಡುಗಡೆ



**ಕಾರ್ಕಳ:** ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರ ಬೆಳೆಯಬೇಕಾದರೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯದ ಅಧ್ಯಯನ ನಡೆಸಬೇಕು. ಹಿರಿಯರ ಜೀವನ ದರ್ಶನವನ್ನು ಅನುಸರಿಸಬೇಕು. ಶಿಕ್ಷಣವಂತ ಸಮಾಜವು ದೇಶದ ಉನ್ನತಿಗೆ ಕಾರಣೀಕರ್ತವಾಗುತ್ತದೆ. ಯುವ ಸಮುದಾಯ ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತು ಕಾರ್ಕಳ ಘಟಕದ ಅಧ್ಯಕ್ಷರಾದ ಕೊಂಡಳ್ಳಿ ಪ್ರಭಾಕರ ಶೆಟ್ಟಿಯವರು ಕ್ರಿಯೇಟಿವ್ ನಿನಾದ ಸಂಚಿಕೆ-6 ನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ನೈಋತ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಎಸ್. ಭೋಜೆಗೌಡ, ಕ.ಸಾ.ಪ.ದ ವಿವಿಧ ಪದಾಧಿಕಾರಿಗಳು, ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಂಸ್ಥಾಪಕರಾದ ಅಶ್ವತ್ ಎಸ್.ಎಲ್. , ಅಮೃತ್ ರೈ, ಗಣಪತಿ ಭಟ್ ಕೆ.ಎಸ್, ಉಪನ್ಯಾಸಕ ಮತ್ತು ಉಪನ್ಯಾಸಕೇತರ ವೃಂದದವರು ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕ ರಾಮಕೃಷ್ಣ ಹೆಗಡೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ಕ್ರಿಯೇಟಿವ್ ಪುಸ್ತಕ ಮನೆಯ

## "ಮೊಬೈಲ್ ಬಿಡಿ ಪುಸ್ತಕ ಹಿಡಿ" ಯೋಜನೆಗೆ ಅಭೂತಪೂರ್ವ ಬೆಂಬಲ



**ಕಾರ್ಕಳ:** ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಮಹತ್ವಾಕಾಂಕ್ಷಿ ಯೋಜನೆಯಾದ "**ಮೊಬೈಲ್ ಬಿಡಿ, ಪುಸ್ತಕ ಹಿಡಿ**" ಅಭಿಯಾನ ಯುವಜನರು ಮತ್ತು ವಿದ್ಯಾರ್ಥಿಗಳನ್ನು ಓದಿನ ಕಡೆಗೆ ಸೆಳೆಯಬೇಕು, ಮೊಬೈಲ್‌ನ ಬಳಕೆಯನ್ನು ಹಿತಮಿತವಾಗಿ ಮಾಡಬೇಕೆಂಬ ಉದ್ದೇಶವಿರಿಸಿಕೊಂಡು ಕಾರ್ಕಳ, ಉಡುಪಿ, ಪುತ್ತೂರು, ಸುಳ್ಯದ ಶಾಲೆಗಳಿಗೆ ಮತ್ತು ಆಸಕ್ತ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸುವ ಕಾರ್ಯ ನಡೆಯಿತು.

ಸಾಹಿತ್ಯಕ್ಷೇತ್ರ ಓದುಗರ ಬರ ಎದುರಿಸುತ್ತಿದೆ ಎಂಬ ಮಾತಿನ ನಡುವೆಯೂ "ದಿನಕ್ಕೊಂದು ಪುಸ್ತಕ"ವನ್ನು ಶಾಲೆಗಳಿಗೆ ತಲುಪಿಸುವ ಕಾರ್ಯ ಮಾಡಲಾಯಿತು. ಕಾರ್ಕಳ ತಾಲೂಕಿನ ಸ್ಥಳೀಯ ಶಾಲೆಗಳನ್ನು ಸಂದರ್ಶಿಸಿ ಪುಸ್ತಕವನ್ನು ಕೊಡಮಾಡಲಾಯಿತು. ಸಾರ್ವಜನಿಕರಿಂದ ಮತ್ತು ವಿದ್ಯಾಭಿಮಾನಿಗಳಿಂದ ಅಪೂರ್ವ ಬೆಂಬಲ ವ್ಯಕ್ತವಾಗಿ ಪ್ರತಿನಿತ್ಯ ಸುಮಾರು ಹತ್ತು ಪುಸ್ತಕಗಳನ್ನು ಪುಸ್ತಕ ದಾನಿಗಳ ನೆರವಿನೊಂದಿಗೆ ವಿತರಿಸಲಾಯಿತು. ಈ ಯೋಜನೆಗೆ ಸಾರ್ವಜನಿಕರು, ಪುಸ್ತಕ ಪ್ರಿಯರಿಂದ ರೂ. 28,110=00 ಸಂಗ್ರಹಗೊಂಡು, ದಿನಕ್ಕೆ 10 ಪುಸ್ತಕದಂತೆ ಒಟ್ಟು 312 ಪುಸ್ತಕಗಳನ್ನು ಜನವರಿ ತಿಂಗಳಿನಲ್ಲಿ ಕಾರ್ಕಳವಲ್ಲದೆ ದೂರದ ಸುಳ್ಯ, ಪುತ್ತೂರಿನ ಶಾಲೆಗಳನ್ನೂ ಆಯ್ಕೆಮಾಡಿ ಪುಸ್ತಕ ವಿತರಿಸಲಾಗಿದೆ ಹಾಗೂ ಪುಸ್ತಕ ಸ್ವೀಕರಿಸಿದ ವಿದ್ಯಾರ್ಥಿಗಳೇ ಸ್ವತಃ ಪತ್ರ ಮುಖೇನ ತಮ್ಮ ಅಭಿಪ್ರಾಯ ತಿಳಿಸುವುದು ಹೆಮ್ಮೆಯ ಸಂಗತಿಯಾಗಿದೆ ಇದು ಪುಸ್ತಕ ಪ್ರೀತಿಯ ದ್ಯೋತಕವಾಗಿದೆ. ಇದೀಗ ಪ್ರತೀ ತಿಂಗಳು ಪುಸ್ತಕ ತಲುಪಿಸುವ ಕಾರ್ಯ ನಡೆಯುತ್ತಿದೆ. ಸಾಹಿತ್ಯಾಸಕ್ತರು, ಶಿಕ್ಷಣ ಪ್ರೇಮಿಗಳು, ಉಪನ್ಯಾಸಕರು, ಶಿಕ್ಷಕ ಬಂಧುಗಳು, ಸಾರ್ವಜನಿಕರು ಈ ಯೋಜನೆಗೆ ಕೈಜೋಡಿಸುವಂತೆ ವಿನಮ್ರವಾಗಿ ಕೇಳಿಕೊಳ್ಳುತ್ತಿದ್ದೇವೆ.

### ಕಾರ್ಕಳದ ಪುಸ್ತಕ ಮನೆಯಲ್ಲಿ

## ಪುಸ್ತಕ ಸಂತೆ



**ಕಾರ್ಕಳ:** ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ನಡೆಸಲ್ಪಡುತ್ತಿರುವ ಕಾರ್ಕಳದ ಪ್ರಸಿದ್ಧ ಪುಸ್ತಕ ಮಳಿಗೆಯಾದ 'ಪುಸ್ತಕ ಮನೆ'ಯಲ್ಲಿ ಏಪ್ರಿಲ್ 23 ರಿಂದ ಏಪ್ರಿಲ್ 29 ರವರೆಗೆ ವಿಶ್ವ ಪುಸ್ತಕ ದಿನಾಚರಣೆಯ ಪ್ರಯುಕ್ತ 'ಪುಸ್ತಕ ಸಂತೆ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಎಲ್ಲಾ ಪುಸ್ತಕಗಳಿಗೂ 10 ರಿಂದ 50 ಶೇಕಡಾ ವಿಶೇಷ ರಿಯಾಯಿತಿಯ ಜೊತೆಗೆ ಪ್ರತೀ ಖರೀದಿಯೊಂದಿಗೆ ವಿಶೇಷ ಕೊಡುಗೆಗಳನ್ನು ನೀಡಲಾಯಿತು. ಪುಸ್ತಕ ಪ್ರೇಮಿಗಳು ಇದರ ಪ್ರಯೋಜನವನ್ನು ಪಡೆದುಕೊಂಡರು.

## ನನ್ನ 'ಕನಸು'



ಹೀಗೆ ಒಂದು ದಿನ, ನಾನು ಏನೂ ಅರಿಯದ ಬಾಲಕಿಯಾಗಿದ್ದಾಗ ನಮ್ಮ ಮನೆಗೆ ಹೊಸ ಅತಿಥಿಯೊಬ್ಬರ ಆಗಮನ ಆಯಿತು. ಪಿಳಿಪಿಳಿ ಕಣ್ಣುಗಳು, ನಿಷ್ಕಲ್ಮಶವಾದ ನಗು, ಕೆಂಪನೆಯ ಕೆನ್ನೆ 'ನಿನ್ನ ತಂಗಿ' ಎಂದು ಪರಿಚಯಿಸಿದ್ದ ನನ್ನಮ್ಮ, ನೀನು ಇನ್ನು ಮುಂದೆ 'ಅಕ್ಕ' ಎಂದದ್ದು ಅಪ್ಪ. ನನ್ನ ಸುತ್ತ ತುಂಬಾ ಜನರು, ಎಲ್ಲರೂ ಆ ಅತಿಥಿಯ ಬಗ್ಗೆಯೇ ಮಾತಾಡುತ್ತಿದ್ದರು. ನನ್ನ ಸುತ್ತ ಏನು ನಡೆಯುತ್ತಿದೆ ಎಂದು ತಿಳಿಯದೆ, ನನ್ನ ಪಾಡಿಗೆ ಒಬ್ಬಳೇ ಕುಳಿತೆ. ಆಗ ಅಮ್ಮ "ನನ್ನ ತಂಗಿ"ಯನ್ನು ನನ್ನ ಬಳಿ ತಂದು ಹೇಳಿದ್ದು ಹೀಗೆ 'ಜಗತ್ತು ಏನೇ ಅನ್ನಲಿ, ಯಾರು ಬೇಕಾದರೂ ನಿನ್ನ ತಂಗಿಯ ಕೈ ಬಿಡಲಿ, ನನ್ನ ನಂತರ ನೀನೇ ಇವಳಿಗೆಲ್ಲಾ. ಯಾವತ್ತೂ "ನಿನ್ನ ತಂಗಿ"ಯ ಕೈ ಬಿಡಬೇಡ' ಎಂದರು. ಆ ಮಾತುಗಳು ಇಂದು ನನ್ನ ಮನಸ್ಸನ್ನು ಆವರಿಸಿವೆ. ಇಂದೂ ಅವಳ ಆ ತುಂಟಾಟ, ಆ ನಗೆ, ಅದೇ ಚಂಚಲ ಮನಸ್ಸು ನನಗೆ ಬಾಲ್ಯವಿದ್ದಾಗಲೇ ಅರಿವಾದ್ದರಿಂದ ಚಂದ ಎನಿಸುತ್ತದೆ. ಮತ್ತೆ ಆ ದಿನಗಳು ಬಾರದೆಂಬುದು ನಿಜ ಆದರೆ ನಮ್ಮೊಳಗಿರುವ ಮಗುವನ್ನು ಎಂದಿಗೂ ಕಳೆದುಕೊಳ್ಳಬಾರದು...



ಮೋನಿಕಾ ಜಿ ಎಂ
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ಜೀವನ



ಜೀವನ ಒಂದು ಸಾಗರ
ಅದರಲ್ಲಿ ನಾನೊಂದು ದೋಣಿ
ದೊಡ್ಡ ಹಡಗು ನಾನಲ್ಲ
ಆದರೆ ದೊಡ್ಡ ಹಡಗಾಗುವ ಆಸೆ

ಸಾಗರದಲ್ಲಿ ಅಲೆಗಳು ಸಾವಿರಾರು
ಪ್ರಯಾಣ ಮಾಡುತ್ತಿರುವ ನನಗೆ ಹೆದರಿಕೆ ಜೋರು
ನಾ ಮುಂದೆ ತಾ ಮುಂದೆ ಎಂದು
ಓಡುತ್ತಿರುವ ದೋಣಿಯಲ್ಲಿ
ನನ್ನ ದೋಣಿಯು ಒಂದಾಗಿಬಿಟ್ಟಿದೆ

ಅಲೆಗಳು ಬರಬಾರದೆಂದು
ಎಷ್ಟೇ ಆಸೆ ಪಟ್ಟರೂ
ವಾಸ್ತವವನ್ನು ಅರ್ಥ ಮಾಡಿಕೊಳ್ಳಲು
ಮನಸ್ಸು ಹಿಂಜರಿಯುತ್ತಿದೆ

ಮನಸ್ಸಿನಲ್ಲಿ ಒಂದು ಆಸೆ
ದೋಣಿ ಹಡಗಾಗಬಲ್ಲದೆಂದು
ಎಂದಾಗುವುದೋ ಗೊತ್ತಿಲ್ಲ
ಆದರೆ ಆಸೆ ತೀವ್ರವಾಗಿದೆ ಮತ್ತೆ ದಿನೇ ದಿನೇ ಹೆಚ್ಚುತ್ತಿದೆ.



ಸಿರಿ ಗೌರಿ ಕೆ ಯು
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ಗುರು ಕರುಣೆ

ಜಗತ್ತಿನಲ್ಲಿ ಅಮ್ಮನ ಹೊರತಾಗಿ ಎಲ್ಲಾ ಸಮಸ್ಯೆಗಳಿಗೂ ದಾರಿದೀಪವಾಗಿ ನಿಲ್ಲಬಲ್ಲ ಸೃಷ್ಟಿ ಎಂದರೆ ಅದು ಶಿಕ್ಷಕರು ಮಾತ್ರ. ಸರಳತೆ, ತಾಳ್ಮೆ, ಸಮಗ್ರತೆಯ ಪ್ರತಿರೂಪವಾಗಿ ಶಿಕ್ಷಕರನ್ನು ಕಾಣಬೇಕು. ಯಾವುದು ಸರಿ ದಾರಿ, ಯಾವುದು ತಪ್ಪು ಎಂಬುದನ್ನು ತಿಳಿ ಹೇಳಲು ಗುರುವೊಬ್ಬರ ಅಗತ್ಯ ಇದ್ದೇ ಇರುತ್ತದೆ.

ಹೀಗೆ ಶಿಕ್ಷಕರೊಬ್ಬರು ತಪ್ಪು ಮಾಡಿದ ವಿದ್ಯಾರ್ಥಿಗೆ ಬೆತ್ತದಲ್ಲಿ ದಂಡಿಸುತ್ತಲೇ ಕೋಪದಿಂದ ಬೈದರು. ಆಗ ಆ ವಿದ್ಯಾರ್ಥಿಗೆ ತನ್ನ ತಪ್ಪಿನ ಅರಿವಾಗಿ ಗುರುಗಳ ಬಳಿ ನಿಂತು ಬಿಕ್ಕಿ ಬಿಕ್ಕಿ ಅಳತೊಡಗಿದ. ಕೊನೆಗೆ ಗುರುಗಳು ಅವನ ಕಣ್ಣೀರು ಕಂಡು ಮನಕರಗಿ ಮತ್ತೆ ತಪ್ಪು ಮಾಡಬೇಡ ಎಂದು ತಿಳಿ ಹೇಳಿ ಎಂದಿನಂತೆ ಪಾಠಕ್ಕೆ ತೊಡಗಿದರು. ಇದನ್ನು ತರಗತಿಯಲ್ಲಿ ಕುಳಿತು ನೋಡುತ್ತಿದ್ದ ವಿದ್ಯಾರ್ಥಿಯೊಬ್ಬನ ಮನದಲ್ಲಿ,

"ಹರ ಮುನಿದರೂ ಗುರು ಕಾಯುವ"ನೆಂಬ ಮಾತು ಸತ್ಯವಾಯಿತು ಎಂದುಕೊಂಡು ಶಿಕ್ಷಕರ "ಗುರುಕರುಣೆಯನ್ನು" ಮನದಲ್ಲಿ ನೆನೆದು ಕೃತಜ್ಞತೆಯನ್ನು ವ್ಯಕ್ತಪಡಿಸಿದನು.



ಶಿವಾತ್ಮಿ ಡಿ ಎಸ್
ದ್ವಿತೀಯ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ನಿನಗಾಗಿ ಕಾದಿರುವೆ

ಕಾರ್ಮೋಡ ಕವಿದಂತಿದೆ ಮನವು
ಹಗುರಾಗ ಬಯಸುತಿದೆ ತನವು
ಬದಲಾಗುತ್ತಿದೆ ಜಗವು
ತಿರುವುಗಳಿವೆ ಕ್ಷಣ ಕ್ಷಣವು

ಕಂಬನಿ ಕರೆದಿದೆ ನಯನ
ನಿನ್ನಲ್ಲೇ ಕರಗಿದೆ ನಾ...
ನನ್ನ ಭಾವನೆಗಳು ಆಗಿವೆ ತನನ
ಊಹಿಸಲಾಗದಷ್ಟು ನೊಂದಿದೆ ಮನ



ಕಂಡ ಕನಸದು ನಾನು
ಅದನರಿಯದಾದೆ ನೀನು...
ಸಿಕ್ಕರೂ ಸಿಗದಷ್ಟು ದೂರ ನೀನು
ನಿನ್ನನ್ನೇ ಬಯಸಿರುವೆ ನಾನು

ಆಡುತ್ತಿದ್ದೆ ಪ್ರೀತಿಯ ಮಾತು
ಬೇರಾರು ಬೇಡ ನಿನ್ನ ಹೊರತು
ಕಾಯುತಿರುವೆ ನಿನ್ನ ಕುರಿತು
ನೊಂದೆನು ನೀ ಸಿಗುವುದಿಲ್ಲವೆಂದು ಅರಿತು

ಎಲ್ಲಿ ನೋಡಿದರಲ್ಲಿ ಮೌನ
ನೀನಿಲ್ಲದೆ... ಬರಿದಾಗಿದೆ ಜೀವನ...
ಅತ್ತಿತ್ತ ಸುಳಿಯುತ್ತಿಲ್ಲ ಗಮನ
ನಿನ್ನೇ ಬಯಸಿ ಪರದಾಡುತಿರುವೆ ನಾ...
ನಿನಗಾಗಿ ಕಾದಿರುವೆ
ಪ್ರತಿದಿನವು ಹಂಬಲಿಸಿರುವೆ
ಇದ ನೀನೆಂದು ಅರಿವೆ...
ಇಂದು ನಾ ಒಬ್ಬಂಟಿಯಾಗಿರುವೆ...

ಕಾದಿರುವೆ ನಿನಗಾಗಿ ಹರಿಯೇ...
ನಾ ನಿನ್ನ ರಾಧೇ...



ಅದ್ವಿತಾ ವಶಿಷ್ಟಾ ಕೆ
ದ್ವಿತೀಯ ಪಿಯುಸಿ ಪಿಸಿಎಂಸಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ನನ್ನ ಶಾಲೆ ಜ್ಞಾನದೀಪ



ನೋಡಲು ಅದು ಎಷ್ಟು ಸುಂದರ
ಮಕ್ಕಳ ಸಮವಸ್ತ್ರವೇ ಸಿಂಗಾರ
ಪುಸ್ತಕದ ಚೀಲ ಬಲು ಹಗುರ
ಅಲ್ಲಿ ಕಲಿಯುವುದೊಂದು ಸಡಗರ
ಬೆಳೆಯಲಿ ಕೀರ್ತಿ ಬಾನೆತ್ತರ
ನಾನಾಗುವೆ ಶಾಲೆಯ ಬಂಗಾರ
ಜ್ಞಾನದದೀಪವನ್ನು ಬೆಳಗಿಸುತ್ತ
ನಮ್ಮ ಶಾಲೆಯು ಜ್ಞಾನದ ಬೀಡಾಗಿದೆ
ಮಲೆನಾಡಿನ ಜನತೆಗೆ ನೀನೊಂದು ಶಾಲೆ
ಮಕ್ಕಳಲ್ಲಿ ತುಂಬುವೆ ಶಿಕ್ಷಣದ ಮಾಲೆ



ಆದ್ಯ ಎ ಎಂ
ದ್ವಿತೀಯ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ನಾನೆಂಬ ಅಹಂ

ನಾನು ನಾನು ಎಂಬುದು ಬಿಡು ಮೊದಲು
ಅಹಂಕಾರವೇ ಆಗಿದೆ ನಿನ್ನ ಅಲಂಕಾರ
ಕೆಟ್ಟತನ ನಿನ್ನಲ್ಲಿ ಆವರಿಸಲು
ಅದುವೆ ನಿನಗೆ ಹತಾರ

ನಿನ್ನ ಹಠ ಸಾಧಿಸಲು
ಹಿತಕರರಿಂದ ಆಗದಿರು ದೂರ
ಆ ವಿಶ್ವಾಸ ಮತ್ತೆ ಗಳಿಸದಿರಲು
ಅಹಂಕಾರವೇ ಆಗಿದೆ ನಿನ್ನ ಅಲಂಕಾರ

ಕೆಟ್ಟ ಜನರ ನಂಬಿ ಕೆಡಲು
ಅನುಭವಿಸುವೆ ಘೋರ
ಬರದೆ ಸುಮ್ಮನಿರದು
ನಿನ್ನ ಕೊನೆಯ ತೀರ....



ಭಾವನ ಗಣಪತಿ
ದ್ವಿತೀಯ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ಕನ್ನಡಂ ಕತ್ತುರಿಯಲ್ತೆ....



ನನ್ನ ಭಾಷೆ, ಕನ್ನಡ
ನನ್ನ ಕೊರಳ ಕಂಪಲ್ಲಿ
ಕಣ್ಣಿಗೆ ಕಾಣುವ ಸವಿನೆನಪಿನಲ್ಲಿ
ಬಾಳುವ ನನ್ನ ಭಾಷೆ
ನನ್ನ ಕಸ್ತೂರಿ ಕನ್ನಡ

ಹುಟ್ಟಿದ ಮಣ್ಣಲ್ಲಿ
ತಾಯಿಯ ಮಡಿಲಲ್ಲಿ
ಹಿರಿಯರ ಗೌರವದಲ್ಲಿ
ಸೂರ್ಯನಿಂದ ಚಂದ್ರನವರೆಗೆ
ತೇಲಾಡುವ ನನ್ನ ಭಾಷೆ
ನನ್ನ ಕಸ್ತೂರಿ ಕನ್ನಡ

ಐದು ಕೋಟಿ ಜನರ ಉಸಿರಲ್ಲಿ
ಶಾಲೆಯಲ್ಲಿ ಕಲಿಸುವ ಅಕ್ಷರದಲ್ಲಿ
ಆತ್ಮದ ಸಂಭಾಷಣೆಯ ಗುರುತಿನಲ್ಲಿ
ಕೊನೆ-ಕೊನೆಯ ಬಣ್ಣದ ಮಾಲೆಯವರೆಗೆ
ಪ್ರತಿಬಿಂಬಿಸುವ ನನ್ನ ಭಾಷೆ
ನನ್ನ ಕಸ್ತೂರಿ ಕನ್ನಡ

ನನ್ನ ಕೊರಳ ಕಂಪಲ್ಲಿ
ಕಣ್ಣಿಗೆ ಕಾಣುವ ಸವಿನೆನಪಿನಲ್ಲಿ
ಬಾಳುವ ನನ್ನ ಭಾಷೆ
ನನ್ನ ಕಸ್ತೂರಿ ಕನ್ನಡ

ಬೆಳಗುವ ಪ್ರತಿದಿವ್ಯಜ್ಯೋತಿಯಲ್ಲಿ
ನಗುವಿನ ಬಣ್ಣ ಮೂಡಿಸುವಲ್ಲಿ
ಸಮುದ್ರದಿಂದ ಬೆಟ್ಟಗುಡ್ಡಗಳವರೆಗೆ
ಹರಿಯುವ ಭಾಷೆ
ನನ್ನ ಕಸ್ತೂರಿ ಕನ್ನಡ

ನನ್ನ ಕೊರಳ ಕಂಪಲ್ಲಿ
ಮನಸಿನಲ್ಲಿ ಕಣ-ಕಣದಲ್ಲಿ
ಬಾಳುವ ನನ್ನ ಭಾಷೆ
ನನ್ನ ಕಸ್ತೂರಿ ಕನ್ನಡ



ಪ್ರೇರಣಾ ಪಿ ಕುಬಲ್
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ವೀರ ಸೈನಿಕ



ಸೈನಿಕ ಅವನೇ ನಮ್ಮ ರಕ್ಷಕ
ಪರರನ್ನು ಹೊಡೆದೋಡಿಸುವ ಮಾಂತ್ರಿಕ
ಅನ್ಯದೇಶೀಯರಿಗೆ ಪಾಠ ಕಲಿಸುವ ಶಿಕ್ಷಕ
ಗುಂಡುಗಳನ್ನು ಬಳಸುವ ತಾಂತ್ರಿಕ

ಭಾರತ ಮಾತೆಯ ಹೆಮ್ಮೆಯ ಪುತ್ರ
ಇವನೇ ನಮ್ಮ ದೇಶದ ನೇತ್ರ
ಬಳಸುವನು ಕಠಿಣವಾದ ಮಂತ್ರ
ದೇಶಕ್ಕೆ ಇವನೊಬ್ಬ ಸುಂದರ ಚಿತ್ರ

ಜನರ ನೋವಿಗೆ ಸ್ಪಂದಿಸುವ ಸ್ಪಂದಕ
ಹಿಂದೂಸ್ಥಾನಿಯರ ಪಾಲಕ
ಬಿಸಿಲು, ಮಳೆ, ಚಳಿಯಲ್ಲಿ ಹೋರಾಡುವ ನಾಯಕ
ದೇಶ ಕಾಯುವುದೇ ಇವನ ಕಾಯಕ

ತಡೆಯುತ್ತಿರುವನು ಪರರ ಷಡ್ಯಂತ್ರ
ಗಡಿಯಲ್ಲಿ ಮಿನುಗುವ ಇವನೊಬ್ಬ ನಕ್ಷತ್ರ
ಕಾಯುವ ನಮ್ಮನ್ನು ಎಣಿಸದೆ ಕುಲ-ಗೋತ್ರ
ಕೀರ್ತಿಪತಾಕೆಯ ಹಾರಿಸುವ ನಮ್ಮ ಮಿತ್ರ

ಶೌರ್ಯ ಚಕ್ರ ಪ್ರಶಸ್ತಿಯ ಸಾಧಕ
ತಡೆಯುವನು ಎಲ್ಲರ ಬಾಧಕ
ಇವನೇ ನಮ್ಮ ದೇಶದ ದ್ಯೋತಕ
ಅವನೇ ನಮ್ಮೆಲ್ಲರ ಹೆಮ್ಮೆಯ ಸೈನಿಕ



ಚಂದನ ಎ ಎಸ್
ಪ್ರಥಮ ಪಿಯುಸಿ ಪಿಸಿಎಂಸಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

ಕಾವ್ಯೋಕ್ತಿ | ಪಾತಾಳ ಕಂಡರೇನು? ಆ ತಾಯಿ ಬಿಡುವಳೇನು; ಕಾಯುವನು ಹೆತ್ತ ಕರುಳು; ಕಾಯುವಳು ಹಗಲು ಇರುಳು – ದ.ರಾ. ಬೇಂದ್ರೆ



# ಪೆಂಗ್ವಿನ್‌ಗಳಿಗೇನು ಗೊತ್ತು ಫಿಸಿಕ್ಸ್‌ನ ಪರಿಮಳ



ಸುಮಾರು 65 ಮಿಲಿಯನ್ ವರ್ಷಗಳಷ್ಟು ಹಿಂದೆ ಬದುಕಿದ್ದವು ಎನ್ನಲಾಗುವ ಡೈನಾಸರ್‌ಗಳ ಮೂಳೆಗಳು ಹಲವಾರು ಸಿಕ್ಕಿವೆ. ಅವುಗಳ ಕಾಲಿನ ಮೂಳೆಗಳ ಉದ್ದವೆಷ್ಟು ಎಂದು ಗೊತ್ತಾದರೆ ಅದು ಎಷ್ಟು ವೇಗವಾಗಿ ಓಡುತ್ತಿತ್ತು ಎಂದು ತಿಳಿಯಬಹುದು. ಹೇಗೆ? ಅದರ ಕಾಲನ್ನು ಸ್ಥೂಲವಾಗಿ ಫಿಸಿಕಲ್ ಪೆಂಡುಲಂ ಎಂದು ಭಾವಿಸಬಹುದು. ಮತ್ತು ಅವುಗಳ ಎರಡು ಹೆಜ್ಜೆಗಳ ಅಂತರವನ್ನು ಪತ್ತೆ ಹಚ್ಚಿ $T=2\pi\sqrt{\frac{2L}{3g}}$ ಎಂಬ ಸೂತ್ರದಿಂದ ಒಂದು ಹೆಜ್ಜೆ ಇಡಲು ಎಷ್ಟು ಸಮಯ ಬೇಕಿತ್ತೆಂದು ತಿಳಿಯಬಹುದು. ಇಲ್ಲಿ ಎಲ್(L) ಡೈನಾಸರ್‌ಗಳ ಕಾಲಿನ ಉದ್ದವನ್ನು ತಿಳಿಸುತ್ತದೆ.

ಕ್ರಿಕೆಟ್ಸ್ ಎಂಬ ಇರುವೆಗೆ ಸುತ್ತಮುತ್ತಲಿನ ತಾಪಮಾನ ಎಷ್ಟು ಎಂದು ತಿಳಿಯುವ ಚಾತುರ್ಯವಿದೆ. ಹೇಗೆ ಎಂದು ಯೋಚಿಸಿದಿರಾ? ಹೀಗೆ: ಈ ಕ್ರಿಕೆಟ್ಸ್ ಇರುವೆಗೆ ಹೊರಗಿನ ತಾಪಮಾನಕ್ಕೆ ಅನುಗುಣವಾಗಿ ದೇಹದ ರಾಸಾಯನಿಕ ದ್ರವಗಳು ಬಿಡುಗಡೆಯಾಗುತ್ತವೆ. ಇವು ಒಂದು ರೀತಿಯಲ್ಲಿ ಚೀರುತ್ತವೆ. ಇದು 25 ಸೆಕೆಂಡಿನ ಅಂತರದಲ್ಲಿ ಎಷ್ಟು ಬಾರಿ ಚೀರುವುದೋ ಅದನ್ನು ಮೂರರಿಂದ ಭಾಗಿಸಿ ನಾಲ್ಕನ್ನು ಕೂಡಿದರೆ ನಿಖರವಾಗಿ ಹೊರಗಿನ ತಾಪಮಾನವನ್ನು ಹೇಳಬಹುದು. ಅದಕ್ಕೆ ವಿಜ್ಞಾನ ಗೊತ್ತಿದೆಯೋ ಇಲ್ಲವೋ, ಆದರೆ ಪ್ರತಿದಿನ ಅದು ವಿಜ್ಞಾನವನ್ನು ಉಪಯೋಗಿಸುತ್ತಿದೆ.

ಫ್ಲೆಮಿಂಗೋ ಎನ್ನುವ ಕಡು ಗುಲಾಬಿ ಬಣ್ಣದ ನೀಳಕಾಲಿನ ಹಕ್ಕಿಗಳನ್ನು ಡಿಸ್ಕವರಿ ಚಾನೆಲ್‌ನಲ್ಲಾದರೂ ನೋಡಿರುತ್ತೀರಿ. ಸ್ವಲ್ಪ ಗಮನವಿಟ್ಟು ನೋಡಿದ್ದರೆ ಜ್ಞಾಪಿಸಿಕೊಳ್ಳಿ. ಈ ಫ್ಲೆಮಿಂಗೋಗಳು ನೀರಿನೊಳಗೆ ನಿಲ್ಲುವಾಗಲೆಲ್ಲ ಒಂದೇ ಕಾಲಿನಲ್ಲಿ ನಿಂತಿರುತ್ತದೆ. ಏಕಿರಬಹುದು? ಎರಡು ಕಾಲುಗಳಿದ್ದರೂ ಒಂದೇ ಕಾಲಿನಲ್ಲಿ ನಿಂತು ಯಾವ ಹರಕೆ ತೀರಿಸಬೇಕಿದೆ ಈ ಫ್ಲೆಮಿಂಗೋಗೆ? ಹರಕೆಯಲ್ಲ, ಇದು ಥರ್ಮೋಡೈನಾಮಿಕ್ಸ್‌ನ ನಿಯಮ. ಹೇಗೆ? ಇಲ್ಲಿದೆ ಉತ್ತರ: ಈ ಫ್ಲೆಮಿಂಗೋಗಳ ಕಾಲುಗಳು ದೇಹದ ಶಾಖವನ್ನು ನೀರಿನೊಳಗೆ ಬೇಗನೆ ಹೊರಹಾಕುವಂಥವು. ಹಾಗಾಗಿ ದೈಹಿಕ ಶಕ್ತಿ ಕಳೆದುಕೊಳ್ಳುವುದು ಬಹಳ ಬೇಗ. ಒಂದೇ ಕಾಲಿನಲ್ಲಿ ನಿಂತರೆ ಅರ್ಧದಷ್ಟು ಶಕ್ತಿ ಉಳಿಸಬಹುದಲ್ಲ ಎಂಬ ಉಪಾಯ ಈ ಫ್ಲೆಮಿಂಗೋದು. ಆದರೆ ಹೊಸದಾಗಿ ಈ ಪ್ರಪಂಚಕ್ಕೆ ಬಂದ ತನ್ನ ಮರಿಗೆ ಎರಡು ಕಾಲಲ್ಲಿ ನಿಲ್ಲುವುದೇ ಕಷ್ಟವಾಗಿರುವಾಗ ಒಂಟಿಕಾಲಲ್ಲಿ ನಿಲ್ಲುವುದಾದರೂ ಹೇಗೆ? ತಾಯಿ ಫ್ಲೆಮಿಂಗೋ ಮರಿ ಫ್ಲೆಮಿಂಗೋಗೆ ಒಂಟಿ ಕಾಲಲ್ಲಿ ನಿಲ್ಲಲು ತರಬೇತಿ ಕೊಡುತ್ತದಂತೆ. ಹೀಗೆ ತಲೆತಲಾಂತರಗಳಿಂದ ಪ್ರತಿ ತಾಯಿ ಫ್ಲೆಮಿಂಗೋ ತನ್ನ ಮರಿಗೆ ಒಂಟಿಕಾಲಲ್ಲಿ ನಿಲ್ಲಲು ತರಬೇತಿ ಕೊಡಲು ಮರೆತಿಲ್ಲ.

ಪೆಂಗ್ವಿನ್‌ಗಳೆಲ್ಲವೂ ಒಂದೇ ರೀತಿ ಕಾಣಿಸುತ್ತವಲ್ಲವೇ? ನಮಗೆ ಮಾತ್ರ ಅಲ್ಲ ಅವುಗಳಿಗೂ ಉಳಿದ ಪೆಂಗ್ವಿನ್‌ಗಳು ಒಂದೇ ರೀತಿಯಲ್ಲಿ ಕಾಣಿಸುತ್ತವೆ. ಹೀಗೊಂದು ಸಂದರ್ಭ ಆಲೋಚಿಸಿ. ಅಂಟಾರ್ಟಿಕಾದಂತ ಕೊರೆಯುವ ಚಳಿಯ ಪ್ರದೇಶದಲ್ಲಿ ಎಲ್ಲೋ ಒಂದಷ್ಟು ಜಾಗದಲ್ಲಿ ಒಂದು ಕೊಳವಿದೆ ಎಂದುಕೊಳ್ಳಿ. ಈ ಪೆಂಗ್ವಿನ್‌ಗಳು ತಮ್ಮ ಮರಿಗಳ ಜೊತೆ ಸಾವಿರಾರು ಸಂಖ್ಯೆಯಲ್ಲಿ ನೀರು ಕುಡಿಯಲು ಕೊಳದ ಸಮೀಪ ಬಂದು ಮರಿಗಳನ್ನು ದಡದಿಂದ ದೂರವೇ ನಿಲ್ಲಿಸಿ ನೀರು ಕುಡಿದು ಬರಲು ತಾಯಿ ಪೆಂಗ್ವಿನ್ ಹೋಗುತ್ತದೆ. ಮರಳಿ ಬರುವಾಗ ತನ್ನ ಮರಿ ಯಾವುದೆಂದು ಪತ್ತೆ ಹಚ್ಚುವುದು ಹೇಗೆ? ಎಲ್ಲವೂ ಒಂದೇ ರೀತಿ ಕಾಣಿಸುತ್ತದಲ್ಲ? ಈಗ ಫಿಸಿಕ್ಸ್ ಕೆಲಸಕ್ಕೆ ಬರುತ್ತದೆ ನೋಡಿ. ಹೌದು ಫಿಸಿಕ್ಸ್. ನಮಗೆ ಮಾತನಾಡಲು ಒಂದು ಧ್ವನಿಪೆಟ್ಟಿಗೆ ಇರುತ್ತದೆ. ಅದು ಒಂದು ನಿರ್ದಿಷ್ಟ ಫ್ರೀಕ್ವೆನ್ಸಿಯನ್ನು ಹೊಂದಿರುತ್ತದೆ. ಫ್ರೀಕ್ವೆನ್ಸಿ: ನಾವು ಎಂದೂ ಎಸ್ ಪಿ ಬಿ ಅವರ ಸ್ವರವನ್ನು ಉದಿತ್ ನಾರಾಯಣರದ್ದು ಎಂದು ತಪ್ಪಿಯೂ ಹೇಳುವುದಿಲ್ಲ. ಏಕೆಂದರೆ ಇಬ್ಬರ ಫ್ರೀಕ್ವೆನ್ಸಿಗಳು ಬೇರೆ ಬೇರೆ. ಅದಿರಲಿ. ಈ ಪೆಂಗ್ವಿನ್‌ಗಳಿಗೆ ಒಂದಲ್ಲ ಎರಡು ಧ್ವನಿಪೆಟ್ಟಿಗೆಗಳು. ಅರ್ಥಾತ್ ಒಂದೇ ಸಮಯಕ್ಕೆ ಎರಡು ಫ್ರಿಕ್ವೆನ್ಸಿ ಬಳಸಬಹುದು!

ಹಾಗಾಗಿ ಅವು ಬೀಟ್ಸ್ ಎಂಬ ವಿಶೇಷವಾದ ವಿದ್ಯಮಾನ ಸೃಷ್ಟಿಸಬಲ್ಲವು. ಬೀಟ್ಸ್: ಎರಡು ಹತ್ತಿರದ ಫ್ರೀಕ್ವೆನ್ಸಿಯ ಶಬ್ದಗಳನ್ನು ಹೊರಡಿಸಿದಾಗ ಮೂರನೆಯ ಫ್ರಿಕ್ವೆನ್ಸಿ ಬರುವುದಿಲ್ಲ, ಬದಲಾಗಿ ಆ ಎರಡು ಫ್ರೀಕ್ವೆನ್ಸಿಯ ನಡುವಿನಲ್ಲಿ ಏರಳಿತವಿರುವ ಅಪರೂಪದ ಶಬ್ದವೊಂದು ಕೇಳಿಸುತ್ತದೆ. ಹೀಗೆ ತಾಯಿ ಪೆಂಗ್ವಿನ್ ತನ್ನ ಬೀಟ್ಸ್ ಉಪಯೋಗಿಸಿ ಮರಿಯನ್ನು ಕರೆಯುತ್ತದೆ. ತನ್ನ ಮರಿಯೂ ತನ್ನದೇ ಆದ ಬೀಟ್ಸ್ ಸೃಷ್ಟಿಸಿ ತಾಯಿಯನ್ನು ಕರೆಯುತ್ತದೆ. ಆಗ ಇಬ್ಬರೂ ಬೀಟ್ಸ್ ಸಹಾಯದಿಂದ ಒಂದಾಗುತ್ತಾರೆ. ನೆನಪಿರಲಿ: ಯಾವುದೇ ಪೆಂಗ್ವಿನ್ ಗಳಿಗೆ ಇನ್ನೊಂದು ಪೆಂಗ್ವಿನ್‌ನ ಬೀಟ್ಸ್ ಅನ್ನು ಅನುಕರಣೆ ಮಾಡಲು ಸಾಧ್ಯವಿಲ್ಲ. ಹಾಗಾಗಿ ಯಾವುದೋ ತಾಯಿ ಪೆಂಗ್ವಿನ್ ಯಾವುದೋ ಬೇಬಿ ಪೆಂಗ್ವಿನ್ ಅನ್ನು ಕರೆಯಲು ಸಾಧ್ಯವಿಲ್ಲ. ಸೃಷ್ಟಿಯ ಮಾಯೆ ನೋಡಿ: ಪೆಂಗ್ವಿನ್‌ಗಳಿಗೆ ಹೀಗೊಂದು ಪರಿಸ್ಥಿತಿ ಎದುರಾದೀತು ಎಂದು ಅರಿತೇ ಎರಡು ಧ್ವನಿ ಪೆಟ್ಟಿಗೆಗಳನ್ನು ಕರುಣಿಸಿತೇನೋ ಈ ಸೃಷ್ಟಿ. ಮಾನವರಿಗೆ ಹೀಗೆ ಎರಡು ಧ್ವನಿ ಪೆಟ್ಟಿಗೆಗಳು ಇದ್ದಿದ್ದರೆ ಏನೇನು ಅನಾಹುತಗಳಾಗುತ್ತಿದ್ದವೋ ಏನೋ!? ಒಂದೇ ಧ್ವನಿ ಪೆಟ್ಟಿಗೆ ಸಾಕು ಬಿಡಿ.

ಕಾರ್ತಿಕ್ ಎಂ.ಬಿ
ಭೌತಶಾಸ್ತ್ರ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ



# ಆತ್ಮವಿಶ್ವಾಸದ ಬದುಕಿಗೊಂದು ಮಾರ್ಗದರ್ಶಿ: ಅರಿವಿನ ದಾರಿ




ಅಶ್ವತ್ ಎಸ್.ಎಲ್. ಅವರ ಅರಿವಿನ ದಾರಿ ಪುಸ್ತಕ ಬದುಕಿನಲ್ಲಿ ಸೋತು ಹತಾಶರಾದವರಿಗೆ, ಬದುಕಿನಲ್ಲಿ ಏನಾದರೂ ಸಾಧಿಸಬೇಕೆಂಬ ಛಲವುಳ್ಳವರಿಗೆ ಅತ್ಯುತ್ತಮ ಕೈಪಿಡಿಯಾಗಿದೆ.

ನೂರಾರು ಕನಸುಗಳನ್ನು ಹೊತ್ತ ಯುವ ಸಮುದಾಯ ತಮ್ಮ ನಿಶ್ಚಿತ ಗುರಿ ಏನಾಗಿರಬೇಕು ಯಾವ ರೀತಿ ಬದುಕಬೇಕು ಎಂಬುದರ ಬಗ್ಗೆ ಗೊಂದಲ ಇರುತ್ತದೆ. ಅದರಲ್ಲೂ ಸಾವಿರಾರು ಆಕರ್ಷಣೆಗಳು ಅವರನ್ನು ಮುತ್ತಿ ಹಿಂಡಿ ಹಿಪ್ಪೆ ಮಾಡುತ್ತವೆ. ಪ್ರತಿಯೊಬ್ಬರಲ್ಲೂ ಮಹಾ ಪ್ರತಿಭೆ ಇದ್ದೇ ಇರುತ್ತದೆ. ಆ ಪ್ರತಿಭೆಯನ್ನು ನಾಶ ಮಾಡುವ ಅನೇಕ ಸಂಗತಿಗಳು ನಮ್ಮ ಜೊತೆಗೆ ಇರುತ್ತವೆ. ಈ ಸಂದರ್ಭದಲ್ಲಿ ಮೊಬೈಲ್, ಪ್ರೇಮ-ಕಾಮ ದುಶ್ಚಟಗಳು, ವಿಲಾಸಿ ಜೀವನ ಯುವ ಸಮುದಾಯವನ್ನು ಕಂಗೆಡಿಸುತ್ತವೆ. ಇಂತಹ ಸಂಗತಿಗಳಿಂದ ಅವರನ್ನು ಹೊರ ತರುವುದು ದೊಡ್ಡ ಸವಾಲು. ಇಂತಹ ಸವಾಲುಗಳಿಂದ ಯುವ ಸಮುದಾಯವನ್ನು ಸರಿದಾರಿಗೆ ತರುವ ಮಾರ್ಗದರ್ಶನವನ್ನು ಈ ಪುಸ್ತಕ ಮಾಡುತ್ತದೆ. ಜೊತೆಗೆ ಪೋಷಕರು ಮತ್ತು ನಾಗರಿಕರು ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಕುರಿತು ಮನೋಜ್ಞವಾಗಿ ವಿವರಿಸುತ್ತದೆ. ಏಕೆಂದರೆ ನಮ್ಮ ಸಮಾಜದಲ್ಲಿ ಪೋಷಕರು ಮತ್ತು ನಾಗರಿಕರು ತಮ್ಮ ಮಕ್ಕಳನ್ನು ಶಾಲೆ ಕಾಲೇಜಿಗೆ ಕಳಿಸಿದರೆ ತಮ್ಮ ಜವಾಬ್ದಾರಿ ಮುಗೀತು ಎಂದು ಭಾವಿಸುತ್ತಾರೆ.

ನಿಜವಾಗಿಯೂ ಇಲ್ಲಿಂದಲೇ ಅವರ ನಿಜವಾದ ಜವಾಬ್ದಾರಿ ಆರಂಭವಾಗುತ್ತದೆ. ಎಷ್ಟೋ ಪೋಷಕರು ಈ ಕುರಿತು ಯೋಚನೆ ಮಾಡುವುದಿಲ್ಲ. ಇಂತಹ ಮನಸ್ಥಿತಿಯ ಪೋಷಕರಿಗೆ ಸರಿಯಾದ ಅರಿವನ್ನು ಈ ಪುಸ್ತಕ ಮೂಡಿಸುತ್ತದೆ. ಅವರು ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಕುರಿತು ಎಚ್ಚರಿಸುತ್ತದೆ.

ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಕ್ಷೇತ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅಮೋಘ ಸಾಧನೆ ಮಾಡಿದ ವ್ಯಕ್ತಿತ್ವಗಳನ್ನು ಈ ಪುಸ್ತಕದಲ್ಲಿ ಮನಮುಟ್ಟುವಂತೆ ಪರಿಚಯಿಸಲಾಗಿದೆ. ಜಗತ್ತಿನಲ್ಲಿ ಸಾಧನೆ ಮಾಡಿದ ಮಹಾ ಸಾಧಕರಿಗೂ 24 ಗಂಟೆಗಳು ಇರುತ್ತವೆ. ನಮಗೂ 24 ಗಂಟೆಗಳು ಇರುತ್ತವೆ. ಈ ಸಮಯದ ಪ್ರತಿಕ್ಷಣವನ್ನು ನಾವು ಹೇಗೆ ಬಳಸಿಕೊಂಡು ಮುನ್ನಡೆಸುತ್ತೇವೆ ಎಂಬುದು ಬದುಕಿನಲ್ಲಿ ಮುಖ್ಯ. ಪ್ರತಿ ಕ್ಷಣವನ್ನು ನಮ್ಮದನ್ನಾಗಿಸಿಕೊಳ್ಳುವ ಬಗೆಯನ್ನು ಸಾಧಕರ ಉದಾಹರಣೆಯೊಂದಿಗೆ ಓದುಗರಿಗೆ ದಾಟಿಸುತ್ತದೆ.

ಮುಖ್ಯವಾಗಿ ವಿದ್ಯಾರ್ಥಿಗಳು ನೀಟು ಸಿಇಟಿ ಜೆಇಇ ಅಂತಹ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳು ಪದವಿಗಾಗಿ ಬರಿಯುವ ಪರೀಕ್ಷೆಗಳಿಗೆ ಹೇಗೆ ತಯಾರಿ ನಡೆಸಬೇಕೆಂಬುದರ ಬಗ್ಗೆ ಅರಿವು ಇರುವುದಿಲ್ಲ. ಪರೀಕ್ಷೆಗೆ ಹೇಗೆ ತಯಾರಾಗಿ ಜಯಿಸಬೇಕೆಂಬ ಮಾರ್ಗದರ್ಶನವನ್ನು ಈ ಪುಸ್ತಕ ಮಾಡುತ್ತದೆ.

ಕೇವಲ ಶೈಕ್ಷಣಿಕವಾಗಿ ಮಾತ್ರ ಈ ಕೃತಿ ಚಿಂತಿಸುವುದಿಲ್ಲ. ಅತ್ಯುತ್ತಮ ಆದರ್ಶದ ಸಮಾಜವನ್ನು ಹೇಗೆ ನಿರ್ಮಿಸಬೇಕೆಂಬುದರ ಬಗ್ಗೆ ಗಾಢವಾಗಿ ಚಿಂತನೆ ಮಾಡುತ್ತದೆ. ಪ್ರತಿಯೊಂದು ವ್ಯಕ್ತಿತ್ವವು ಆದರ್ಶಮಯ ಸಂಸ್ಕಾರಯುತ ಮನಸ್ಸಿನಿಂದ ಕೂಡಿದ್ದರೆ ಸಮಾಜವು ಆ ನಿಟ್ಟಿನಲ್ಲಿ ಮುನ್ನಡೆಯುತ್ತದೆ ಎಂಬ ನಂಬಿಕೆ ಈ ಕೃತಿಯಲ್ಲಿ ಅಂತರ್ ವಾಹಿನಿಯಾಗಿ ಹರಿಯುತ್ತದೆ.

ಲೇಖಕರಾದ ಅಶ್ವತ್ ಎಸ್.ಎಲ್ ಅವರು ಈ ಕೃತಿಯನ್ನು ಓರ್ವ ಸಮಾಜ ವಿಜ್ಞಾನಿಯಾಗಿ ರಚಿಸಿದ್ದಾರೆ. ಅವರು ಅತ್ಯುತ್ತಮ ಆದರ್ಶದ ಗಣಿತ ಉಪನ್ಯಾಸಕರು. ಗಣಿತ ವಿಷಯವನ್ನು ಕಬ್ಬಿಣದ ಕಡಲೆ ಎಂದು ಭಾವಿಸಿದ ಸಮಾಜಕ್ಕೆ ಸುಲಭವಾಗಿ ಸರಳವಾಗಿ ಹೇಳುವ ವಿಧಾನವನ್ನು ಕರಗತ ಮಾಡಿಕೊಂಡವರು. ಸಾವಿರಾರು ವಿದ್ಯಾರ್ಥಿಗಳಿಗೆ ಸುಲಭದಲ್ಲಿ ಗಣಿತವನ್ನು ಕಲಿಸಿ ಅವರ ಬಾಳಿಗೆ ಬೆಳಕಾದವರು.

ಕ್ರಿಯೇಟಿವ್ ಎಂಬ ಶಿಕ್ಷಣ ಸಂಸ್ಥೆಯನ್ನು ಕಟ್ಟಿ, ಪುಸ್ತಕಮನೆ ಎಂಬ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ನಾಡಿನಲ್ಲಿ ಶಿಕ್ಷಣದ ಕಂಪನ್ನು ಪುಸ್ತಕದ ಇಂಪನ್ನು ಹರಡುತ್ತಿರುವವರು. ಶಿಕ್ಷಕ ವೃತ್ತಿಯನ್ನು ಅಪಾರವಾಗಿ ಪ್ರೀತಿಸುವ ಗೌರವಿಸುವ ಇವರು ಅಂತ:ಕರಣ, ಮಾನವೀಯತೆ ಸಹನೆ, ಶ್ರದ್ಧೆ, ಬದ್ಧತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡವರು. ನಡೆ-ನುಡಿಯಲ್ಲಿ ಸಮತೆ ಇದ್ದಾಗ ಮಾತ್ರ ಇನ್ನೊಬ್ಬರಿಗೆ ಬುದ್ಧಿ ಹೇಳುವ ನೈತಿಕತೆ ಇರುತ್ತದೆ. ಇವರ ಬರಹಗಳನ್ನು ಓದಿದಾಗ ಅಂತ ನೈತಿಕ ವ್ಯಕ್ತಿತ್ವ ಇವರದಾಗಿದೆ ಎಂಬುದು ಗೋಚರವಾಗುತ್ತದೆ.

ಪ್ರತಿಯೊಬ್ಬ ಶಿಕ್ಷಕ ಈ ಕೃತಿಯನ್ನು ಓದಿದಾಗ, ಶಿಕ್ಷಕನ ಒಳಗಿರುವ ಗೊಂದಲಗಳನ್ನು ನಿವಾರಿಸಿ ಸ್ಪಷ್ಟವಾದ ದಾರಿಯನ್ನು ತೋರಿಸುತ್ತದೆ. ವಿದ್ಯಾರ್ಥಿಗಳನ್ನು ರೂಪಿಸಬೇಕಾದ ನೈತಿಕ ಜವಾಬ್ದಾರಿಯನ್ನು ಮನಗಾಣಿಸುತ್ತದೆ. ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡಬೇಕಾಗಿರುವ ಶಿಕ್ಷಕ ಎಷ್ಟೇ ಎಚ್ಚರದಿಂದ ಇದ್ದರೂ ಸಾಲದು. ವಿದ್ಯಾರ್ಥಿಗಳ ಮನಸ್ಸುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವರಿಗೆ ಸ್ಪಂದಿಸಿ ಅವರ ಗುಣ - ಅವಗಣಗಳನ್ನೆಲ್ಲ ಪರಿಶೀಲಿಸಿ ಸರಿ ದಾರಿಗೆ ತರುವ ಜವಾಬ್ದಾರಿ ಇರುತ್ತದೆ. ಇಂತಹ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕೆಂಬ ಅರಿವು ಅನೇಕರಿಗೆ ಇರುವುದಿಲ್ಲ. ಈ ಅರಿವನ್ನು ಪುಸ್ತಕ ಮನೋಜ್ಞವಾಗಿ ಕಟ್ಟಿಕೊಡುತ್ತದೆ.

ಪ್ರತಿಯೊಬ್ಬರ ಮನೆಯಲ್ಲಿ ಇರಬೇಕಾದ ಪುಸ್ತಕ ಇದು. ಬಹಳ ಸರಳವಾಗಿ ನೇರವಾಗಿ ಲವಲವಿಕೆಯ ಭಾಷೆಯ ಮೂಲಕ ವಿಚಾರಗಳನ್ನು ದಾಟಿಸುತ್ತದೆ. ಇದರಿಂದ ಓದುಗರಿಗೆ ಅರ್ಥವಾಗುತ್ತದೆ. ಒಂದು ಸಾರಿ ಪುಸ್ತಕವನ್ನು ಕೈಗೆತ್ತಿಕೊಂಡರೆ ಮುಗಿಯುವವರೆಗೆ ಕೆಳಗಡೆ ಇಡಲು ಮನಸ್ಸು ಬರುವುದಿಲ್ಲ. ಅಷ್ಟೊಂದು ಆಪ್ತವಾಗಿ ಓದಿಸಿಕೊಂಡು ಹೋಗುತ್ತದೆ. ಇಂತಹ ಕೃತಿಯನ್ನು ಕನ್ನಡಿಗರಿಗೆ ನೀಡಿದ ಅಶ್ವತ್ ಎಸ್.ಎಲ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು

ಡಾ. ರಾಜಶೇಖರ್ ಹಳೆಮನೆ
ಖ್ಯಾತ ಕಥೆಗಾರ ಮತ್ತು ವಿಮರ್ಶಕರು



## ಮೌನಾಲಾಪ

ಮನದೀ ಆವರಿಸಿದೆ ಮೌನ...
ಹೇಗೆ ಎದುರಿಸಲಿ ನನ್ನೆಲ್ಲಾ ದುಗುಡ ದುಮ್ಮಾನ...
ಕಾಣದ ಕೈಯ ಆಶ್ರಯ ಬೇಡುತಲಿದೆ ಈ ಮನ...
ಆಡಿಕೊಳ್ಳುತಲಿದೆ ನಾನಾ ತರ ಈ ಸಮಾಜದ ಜನ...
ನಾನೇನೆಂಬುದ ಅರಿತಿದ್ದೆ ನಾನು...
ಅಷ್ಟುಸಾಕು ಈ ಜೀವಕೆ ಬೇಕು ಇನ್ನೇನು...?
ಸತ್ಯ ನಿನ್ನಲ್ಲಿರೆ ಅಂಜಿಕೆ ಇನ್ಯಾಕೆ?
ತೂಗುವ ತಕ್ಕಡಿಗೆ ಸಾಮಾಗ್ರಿ ಯಾವುದಾದರೇನಂತೆ?
ಬದುಕು ಹಂಬಲಿಸುವ ಜೀವಕೆ ಸನ್ಮಾರ್ಗ
ಯಾವುದಾದರೇನಂತೆ?
ಎಲ್ಲರ ದಾರಿ ಬೇರೆ ಬೇರೆ...
ಕೊನೆಗೆ ತಲುಪುವ ಗುರಿ ಒಂದೇ...
ಈ ನಡುವೆ ನಾ ಮುಂದೆ...ತಾ ಮುಂದೆ...
ಇದನ್ನರಿಯದ ಜನ ಬರೀ ಕುರಿ ಮಂದೆ...

ಉಮೇಶ್
ಅರ್ಥಶಾಸ್ತ್ರ ಉಪನ್ಯಾಸಕರು,
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ



ಕಾವ್ಯೋಕ್ತಿ | ಅಂಜಿದರೆ ಅಮರುವುದು ಮಂಜು; ಅಂಜಿಕೆ ಮಂಜು, ದಿಟ್ಟತನ ದಾರಿ ಪಂಜು. - ಕೆ.ಎಸ್. ನರಸಿಂಹಸ್ವಾಮಿ

